ದ್ರಾವಿಡರಾಗಿರುವರು. ನಗರಗಳಿಂದ ದೂರವಾದ ಇವರು ವೇಷ ಭಾಷೆ, ಆಚಾರಗಳಲ್ಲಿ ಕನ್ನಡಿಗರ ಮೂಲಸಂಸ್ಕೃತಿಯ ಕುರುಹುಗಳನ್ನು ಈಗಲೂ ಉಳಿಸಿಕೊಂಡಿರುವರು.

ಕ್ರಿ. ಪೂ. ೧೦೦ರಿಂದಲೂ ಕರ್ನಾಟಕದಲ್ಲಿ ವರ್ಣಾಶ್ರಮಧರ್ಮ ಪ್ರಬಲವಾಗಿತ್ತು. ಅವಿಭಕ್ತ ಕುಟುಂಬ ಪದ್ಧತಿ ಭದ್ರವಾಗಿದ್ದಿತು. ವ್ಯವಸಾಯ, ವ್ಯಾಪಾರ ಮತ್ತು ಗೃಹ ಕೈಗಾರಿಕೆಗಳು ವಂಶಪಾರಂಪರ್ಯವಾಗಿ ಸಾಗಿ ಬಂದು ನಾಡಿನ ಒಂದೊಂದು ಕುಟುಂಬವೂ ಸುಖವಾಗಿದ್ದಿತು. ತಂತಮ್ಮ ಮನೆತನದ ವೃತ್ತಿಯನ್ನು ಬೆಳೆಯುವಾಗಲೇ ಮಕ್ಕಳು ಕಲಿತು ಬೇಗ ದುಡಿಮೆಗಾರರಾಗುತ್ತಿದ್ದರು. ವೃತ್ತಿಯನ್ನು ಮಾರ್ಪಾಟು ಮಾಡಿಕೊಳ್ಳಲು ಅವಕಾಶವೂ ಇಲ್ಲದೇ ಇರಲಿಲ್ಲ. ನಮ್ಮ ಊರು, ನಮ್ಮ ಮನೆತನ, ನಮ್ಮ ಬಂಧುಬಳಗ ಜೊತೆಗೆ ನಮ್ಮ ವೃತ್ತಿ ಎಂಬ ಅಭಿಮಾನ ಪ್ರತಿಯೊಬ್ಬರಲ್ಲೂ ತುಂಬಿತುಳುಕಾಡುತ್ತಿತ್ತು. ಧನ್ನಿಕ (ಧಾನ್ಯ ವ್ಯಾಪಾರಿ), ಕೋಲಿಕ (ನೇಕಾರ), ತಿಲಪಿಸಕ (ಗಾಣಿಗ), ಕಾಸಕಾರ (ಕಂಚುಗಾರ), ಕಮ್ಮಾರ, ಚಮ್ಮಾರ, ಸುವರ್ಣಕಾರ (ಅಕ್ಕಸಾಲೆ), ಮಣಿಕಾರ (ರತ್ನದ ಕೆಲಸಗಾರ), ಕಲ್ಲುಕುಟಿಗ, ಬಡಗಿ, ಉಪ್ಪಾರ–ಮುಂತಾದ ವೃತ್ತಿಯುಳ್ಳ ಜನಗಳು ಹಳ್ಳಿಯಿಂದ ದಿಳ್ಳಿಯ ತನಕ ಹರಡಿದ್ದರು. ಮನೆಯ ಮಕ್ಕಳು ಅವರವರ ವೃತ್ತಿಗಳಲ್ಲಿ ಪ್ರವೀಣರಾಗಿ ಕ್ರಿಯಾಶೀಲರಾಗುತ್ತಿದ್ದರು. ಈ ಕೆಲಸಗಾರರು ಒಬ್ಬರಿಗೊಬ್ಬರು ಸಹಕರಿಸಿ ಒಂದೊಂದು ಹಳ್ಳಿಯೂ ಇದ್ದುದರಲ್ಲಿ ಸ್ವಯಂಪೂರ್ಣವಾಗಿರುತ್ತಿತ್ತು. ಈಗ ಗೃಹಕೈಗಾರಿಕೆಗಳು ಮಾಯವಾಗುತ್ತ ಬಂದಿವೆ. ಯಂತ್ರರಾಕ್ಷಸ ಜನಿಸಿ ಜನತೆಯ ಕೈಯನ್ನು ಕಟ್ಟಿಹಾಕಿರುವನು. ಎಲ್ಲೆಲ್ಲೂ ಪರಾವಲಂಬನೆ ಬಂದು ಜನತೆಯ ಜೀವನ ಅಸ್ತವ್ಯಸ್ತವಾಗಿ ಕಲಕಿ ಹೋಗಿದೆ. ಪರಂಪರಾಗತವಾಗಿಬಂದ ವೃತ್ತಿಗಳನ್ನು ಮರೆತೆವು. ಹೊಸದನ್ನು ಕಲಿಯಲು ಆಯುಷ್ಯವನ್ನೂ ಹಣವನ್ನೂ ಪೋಲುಮಾಡುತ್ತಿರುವೆವು.

ಕುಟುಂಬ ಜೀವನದಲ್ಲೂ ಏರುಪೇರಾಯಿತು. ಮನೆಯಲ್ಲಿ ಹುಟ್ಟಿದವರಲ್ಲಿ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹೋಗಿ ಹೊಸಹೊಸ ಉದ್ಯೋಗಗಳಲ್ಲಿ ನಿರತರಾಗಿ ಮನೆತನದ ಸಂಘಟನೆ ಕುಗ್ಗುತ್ತಿದೆ ಎನಿಸುವುದಿಲ್ಲವೆ ?

ಗ್ರಾಮ-ನಗರ ವ್ಯವಸ್ಥೆ

ಕರ್ನಾಟಕದಲ್ಲಿ ಬೇಸಾಯವು ಅತಿಮುಖ್ಯ ವೃತ್ತಿಯಾಗಿತ್ತು. ಬೇಸಾಯಗಾರರು ಬಹುಮಟ್ಟಿಗೆ ಹಳ್ಳಿಗರು. ರೈತನಿಗೆ ಬೇಕಾದ ಪರಿಕರಗಳನ್ನು ಒದಗಿಸುವ ಗೃಹಕೈಗಾರಿಕೆಗಳೂ ಹಳ್ಳಿಯಲ್ಲಿದ್ದವು. ನೇಗಿಲಯೋಗಿಗಳು ಸಂಘಟನೆಯಾಗಿ ತಮ್ಮದೇ ಆದ ಸಂಘವನ್ನು ಮಾಡಿಕೊಳ್ಳುತ್ತಿದ್ದರು. ಇಂಥ ಸಂಘಕ್ಕೆ 'ಮೇಳಿ', 'ಮೇಂಟಿ' ಎಂಬ ಹೆಸರುಗಳಿದ್ದವು. ಇವುಗಳ ಅರ್ಥ ನೇಗಿಲು ಎಂದು. ರಾಜ್ಯದ ಆದಾಯದ ಬಹುಪಾಲು ಭೂಕಂದಾಯದಿಂದಲೇ ಬರುತ್ತಿತ್ತು. ಭೂಮಿಯನ್ನು ತರಿ, ಖುಷ್ಕಿ, ಬಾಗಾಯತು ಎಂಬುದಾಗಿ ಅದರದರ ಫಲವತ್ತತೆ ಹಾಗೂ ನೀರಿನ ಸೌಕರ್ಯ ನೋಡಿ ವಿಂಗಡಿಸಿದ್ದರು. ಎಲ್ಲ ಭೂಮಿಯ ಮೇಲೂ ಭೂಕಂದಾಯವನ್ನು ರಾಜರು ವಿಧಿಸಿದ್ದರು. ಸಾಮಾನ್ಯವಾಗಿ ಭೂಮಿಯ ಹುಟ್ಟುವಳಿಯ ಆರರಲ್ಲಿ ಒಂದು ಭಾಗವನ್ನು ಅರಸನಿಗೆ ಕೊಡಬೇಕಾಗಿದ್ದಿತು. ಭೂಕಂದಾಯವಲ್ಲದೆ ಸಂದರ್ಭೋಚಿತವಾದ ಹೆಚ್ಚಿನ ಕರಗಳನ್ನೂ ರೈತನು ಕೊಡಬೇಕಾಗಿತ್ತು. ಸ್ಥಳೀಯ ಪಂಚಾಯತಿಗಳೂ ಊರಿನ ಸೌಕರ್ಯವನ್ನು ಹೆಚ್ಚಿಸಲು ಮನೆಗಂದಾಯ, ಹಂದರುವಣ (ಚಪ್ಪರಗಳಮೇಲೆ ವಿಧಿಸಿದ ಸುಂಕ) ಇವಲ್ಲದೆ ನಾನಾ ವೃತ್ತಿಗಳ ಮೇಲೂ ಸುಂಕವನ್ನು ವಿಧಿಸುತ್ತಿದ್ದರು.

ಹಳ್ಳಿಯ ಆಡಳಿತವನ್ನು ಹಳ್ಳಿಯ ಮುಖಂಡರೇ (ಹಳ್ಳಿಗರಿಗೆ ಬೇಕಾದವರು) ನೋಡಿಕೊಳ್ಳುತ್ತಿದ್ದರು. ಈ ಸಂಘವನ್ನು 'ಮಹಾಜನ' ಎಂದು ಕರೆಯುತ್ತಿದ್ದರು. ದೇವಾಲಯ ವ್ಯವಸ್ಥೆ, ಗ್ರಾಮನೈರ್ಮಲ್ಯ, ಕೆರೆಕಾಲುವೆಗಳ ನಿರ್ಮಾಣ, ಶಿಕ್ಷಣದ ಏರ್ಪಾಟು ಇವನ್ನು ಮಹಾಜನ ಸಂಸ್ಥೆ ನೋಡಿಕೊಳ್ಳುತ್ತಿತ್ತು. ಪ್ರತಿಯೊಂದು ವೃತ್ತಿಯವರೂ ಕಲೆತು ತಂತಮ್ಮ ಸಂಘಗಳನ್ನು ಮಾಡಿಕೊಂಡಿದ್ದರು. ಇವಕ್ಕೆ 'ಶ್ರೇಣಿ'ಗಳೆಂದು ಹೆಸರು. ರಾಜನಪರವಾಗಿ ಗ್ರಾಮದಲ್ಲಿ ಗೌಡ (ಗಾವುಂಡ) ಮತ್ತು ಗಣಕ (ಶಾನುಭೋಗ-ಕರಣಿಕ) ಮುಂತಾದ ಅಧಿಕಾರಿಗಳೂ ಇರುತ್ತಿದ್ದರು. ಮಹಾಜನ ಸಭೆಯಲ್ಲೂ ಇವರು ಸದಸ್ಯರಾಗಿರುತ್ತಿದ್ದರು. ಇವರಿಗೆ ರಾಜರು ಮಾನ್ಯ (ಕಂದಾಯ ರಹಿತ ಭೂಮಿ) ಗಳನ್ನು ಕೊಟ್ಟಿದ್ದರು. ಸ್ಥಳೀಯ ಆಡಳಿತದಲ್ಲಿ ಸರ್ಕಾರ ಬಹುಮಟ್ಟಿಗೆ ಕೈಹಾಕುತ್ತಿರಲಿಲ್ಲ. ಹಳ್ಳಿಗರ ಆಡಳಿತ ಹಳ್ಳಿಗರ ಕೈಯಲ್ಲಿಯೇ ಇದ್ದಿತು.

ಗಾವುಂಡನು ರಾಜನ ಪರವಾಗಿ ಕರ ಸಂಗ್ರಹಮಾಡುತ್ತಿದ್ದನು. ಈತನೇ ಊರಿನ ನ್ಯಾಯಾಧಿಕಾರಿ ಹಾಗೂ ದಂಡಾಧಿಕಾರಿಯೂ ಆಗಿದ್ದನು. ಗಾವುಂಡ ಪದವಿಯು ವಂಶಪಾರಂಪರ್ಯವಾಗಿ ಬಂದ ಅಧಿಕಾರವಾಗಿತ್ತು. ಕೆಲವೊಮ್ಮೆ ಗಾವುಂಡನು ಮೃತನಾದಾಗ ಅವನ ಹೆಂಡತಿಯೇ ಈ ಅಧಿಕಾರವನ್ನು ಚಲಾಯಿಸಿದ ಸಂದರ್ಭಗಳು ಶಾಸನಗಳಲ್ಲಿ ದೊರೆಯುತ್ತವೆ.

ನಗರಗಳನ್ನು ನಿರ್ಮಿಸುವಾಗ ಹಿಂದೆ ಮೊಟ್ಟ ಮೊದಲು ರಕ್ಷಣೆಯ ಕಡೆ ಗಮನಹರಿಸುತ್ತಿದ್ದರು. ನಗರದ ಸುತ್ತಲೂ ಭದ್ರವಾದ ಕೋಟೆಯಿರುತ್ತಿತ್ತು. ಕೋಟೆಯ ಹೊರಭಾಗದಲ್ಲಿ ಕಂದಕವಿದ್ದು ಸದಾ ನೀರಿನಿಂ[illegible] ತುಂಬಿರುತ್ತಿತ್ತು. ಶತ್ರುಗಳ ದುರಾಕ್ರಮಣಕ್ಕೆ ನಗರ ತುತ್ತಾಗದಂ[illegible] ಕೋಟೆಯ ಮೇಲೆ ಸದಾ ಕಾವಲಿರುತ್ತಿತ್ತು. ಆಹಾರ ವಸ್ತು ಹೇರಳವ[illegible] ಜಲಸಮೃದ್ಧವಾಗಿ ಗುಡ್ಡ ಬೆಟ್ಟಗಳಿಂದ ಅನತಿ ದೂರವಾದ ಸ್ಥಳದಲ್ಲಿ [illegible]ವನ್ನು ನಿರ್ಮಾಣ ಮಾಡುತ್ತಿದ್ದರು. 'ವೀಥಿ' ಬಾವಿ, ಜಲಾಶಯ, ಉದ್[illegible]ವನ, ಪುಷ್ಪವಾಟ, ಪಾನಗೃಹ, ದೇಗುಲ, ಸರೋವರಗಳಿಂದ ನಗ[illegible] ಕಂಗೊಳಿಸಬೇಕೆಂಬ ನಿಯಮವಿದ್ದಿತು. ನಗರದ ಜನಸಂಖ್ಯೆಯನ್ನು ನೋ[illegible]ಕೊಂಡು ಎರಡರಿಂದ ಏಳರವರೆಗೆ ಬಡಾವಣೆಗಳಿರುತ್ತಿದ್ದವು. ಶಿಕ್ಷಣ ಕೇಂದ್ರಗಳಾಗಿ ಮಠಗಳೂ ಅಗ್ರಹಾರಗಳೂ ಘಟಿಕಾಸ್ಥಾನ (ವಿಶ್ವವಿದ್ಯಾನಿಲಯ[illegible] ಗಳೂ ನಗರ ಜೀವನದ ಅಂಗಗಳಾಗಿದ್ದವು. ಘಟಿಕಾಸ್ಥಾನಗಳು ಪ್ರೌಢವಿದ[illegible]ಭ್ಯಾಸಕ್ಕೆ ಕೇಂದ್ರಗಳೆನಿಸಿ ನಾಡಿನ ಮೂಲೆ ಮೂಲೆಗಳಿಂದಲೂ ಪ್ರತಿಭಾವಂ[illegible] ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು.

ನಗರ ಜನಸಮುದಾಯವನ್ನು ಹದಿನೆಂಟು ಬಣಗಳಾಗಿ ವಿಂಗಡಿಸಿದ್ದರು. ಪಟ್ಟಣಸ್ವಾಮಿ, ಸೇನಬೋವ, ಮಣಿಗಾರ, ಮುಮ್ಮರಿದಂಡ ಮತ್ತು ವರ್ತಕ ಸಮಾಜದ ಪ್ರತಿನಿಧಿಗಳು ನಗರಸಭೆಯ ಸದಸ್ಯರಾಗುತ್ತಿದ್ದರು. ಆಯಾ ವೃತ್ತಿಗನುಸಾರವಾಗಿ ಶ್ರೇಣಿಗಳಿರುತ್ತಿದ್ದವು. ಈ ಶ್ರೇಣಿಗಳು ಪಟ್ಟಣಸ್ವಾಮಿ ಜೊತೆಯಾಗಿ ಮಹಾಜನಸಭೆ ಎನಿಸುತ್ತಿತ್ತು. ಜನಾರೋಗ್ಯ ರಕ್ಷಣೆ, ಅನ್ನಸತ್ರಗಳ ಪರಿಪಾಲನೆ ರಸ್ತೆಗಳ ಸುಸ್ಥಿತಿ ಮುಂತಾದ ಕಾರ್ಯಗಳ ಹೊಣೆಯನ್ನು ಪಟ್ಟಣಸ್ವಾಮಿ ಹೊತ್ತಿದ್ದನು. ವಣಿಜಸಮಾಜವೇ ನಗರಸಂಘದಲ್ಲಿ ಮಹತ್ವದ ಪಾತ್ರ ವಹಿಸುತ್ತಿತ್ತು. ಗಾಣಿಗರು, ಕುಂಬಾರರು, ಕುಸೀದಕರು, ಕಾರ್ಮಿಕರು ಮತ್ತು ಪಾಂಚಾಲರು

ಇವರನ್ನು ಶಿಲ್ಪಿಗಳೆನ್ನುತ್ತಿದ್ದರು. ಈ ಶಿಲ್ಪಿಸಂಘದ ಶ್ರೇಣಿಗಳು ಈಗಿನ ಬ್ಯಾಂಕಿನಂತೆ ಕಾರ್ಯ ನಿರ್ವಹಿಸುತ್ತಿದ್ದವು. ವರ್ತಕ ಸಮುದಾಯದಲ್ಲಿ ವೀರ ಬಣಜಿಗರದೇ ಮೇಲುಗೈದರೂ ಕೆಲವೊಮ್ಮೆ ಬ್ರಾಹ್ಮಣರೂ ವರ್ತಕ ವೃತ್ತಿಯನ್ನು ಕೈಗೊಳ್ಳುತ್ತಿದ್ದರು.

ಮನೆಗಳು, ಅಂಗಡಿಗಳು, ಗಾಣಗಳಮೇಲೂ ಕುಂಬಾರರು, ಮಡಿವಾಳರು, ಕಲ್ಲುಕುಟಿಗರು ಇವರುಗಳ ಮೇಲೂ ನಗರಸಭೆ ತೆರಿಗೆ ಹೊರಿಸುತ್ತಿದ್ದಿತು. ಹೊರಗಡೆಯಿಂದ ಬರುವ ಮತ್ತು ಹೊರಗೆ ಹೋಗುವ ಸರಕುಗಳ ಮೇಲೂ ತೆರಿಗೆ ಬೀಳುತ್ತಿತ್ತು.

ಗ್ರಾಮದ ಆಗುಹೋಗುಗಳು ಗ್ರಾಮದ ಕೈಯಲ್ಲಿಯೇ ಇತ್ತು. ನಗರದ ಆಗುಹೋಗುಗಳು ನಗರಸಭೆಯ ಆಡಳಿತಕ್ಕೆ ಸೇರಿದ್ದವು. ಬಹುಮಟ್ಟಿಗೆ ರಾಜರು ಇವುಗಳ ದಿನಚರಿಯ ವ್ಯವಹಾರಕ್ಕೆ ಕೈಹಾಕುತ್ತಿರಲಿಲ್ಲ. ರಾಜನ ಬೊಕ್ಕಸಕ್ಕೆ ಹಳ್ಳಿಯಿಂದಲೂ, ನಗರದಿಂದಲೂ ತೆರಿಗೆಯ ರೂಪದಲ್ಲಿ ಸಂಪತ್ತು ಹರಿಯುತ್ತಿತ್ತು. ಪ್ರಜಾರಕ್ಷಣಾಕಾರ್ಯವನ್ನು ರಾಜನು ಶ್ರದ್ಧೆಯಿಂದ ನೋಡಿಕೊಳ್ಳುತ್ತಿದ್ದನು.

ಹಳ್ಳಿಗಳಲ್ಲಿ ವಂಶಪಾರಂಪರ್ಯವಾಗಿ ಬಂದಿದ್ದ ಗಾವುಂಡ ಮತ್ತು ಸೇನಬೋವರ ಅಧಿಕಾರ ಈಗ ಪಲ್ಲಟವಾಗಿದೆ. ಇವರಿಗೆ ಬದಲಾಗಿ ಗ್ರಾಮ ಸೇವಕರನ್ನು ಸರ್ಕಾರ ನೇಮಿಸಿದೆ. ಊರಿಗೆ ಸಂಬಂಧವಿಲ್ಲದ, ಎಲ್ಲಿಂದಲೋ ಬರುವ ಮತ್ತು ಆಗಾಗ ವರ್ಗವಾಗುವ ಈ ಗ್ರಾಮಸೇವಕರ ಆಡಳಿತಕ್ಕೆ ನಮ್ಮ ಜನ ಹೊಂದಿಕೊಳ್ಳಬೇಕಾಗಿದೆ. ಪಂಚಾಯತಿಗಳೆಂಬ ಸ್ಥಳೀಯ ಸಂಸ್ಥೆಗಳೂ ಹಳ್ಳಿಯ ಒಳಾಡಳಿತ ನಡೆಸುತ್ತಿವೆ. ಪಂಚಾಯತಿಯಲ್ಲಿ ಹಳ್ಳಿಯ ಚುನಾಯಿತ ಮುಖಂಡರೇ ಸದಸ್ಯರಾಗಿರುವರು.

ನಗರಗಳ ಆಡಳಿತ ಈಗಲೂ ನಗರಸಭೆಯ ಕೈಯಲ್ಲಿಯೇ ಇದೆ. ಇದರ ಸದಸ್ಯರು ಚುನಾಯಿತ ಸದಸ್ಯರು, ಸಾಮಾನ್ಯ ನಗರಸಭೆಯನ್ನು ಮುನಿಸಿಪಾಲಿಟಿ ಎಂದೂ ದೊಡ್ಡ ದೊಡ್ಡ ನಗರಸಭೆಯನ್ನು ಕಾರ್ಪೊರೇಷನ್ ಎಂದೂ ಈಗ ಕರೆಯುವರು.

ಹಳ್ಳಿಯ ಮತ್ತು ನಗರದ ವಿದ್ಯಾಸಂಸ್ಥೆಗಳಿಗೆ, ದೇಗುಲಗಳಿಗೆ ಹಿಂದಿನಿಂದಲೂ ರಾಜರು ಕೈತೆರೆದು ಸಹಾಯ ಮಾಡುತ್ತಿದ್ದರು. ಈಗಲೂ ಈ ವ್ಯವಸ್ಥೆ ಪ್ರಜಾಸರ್ಕಾರದಿಂದ ಕುಂಠಿತವಾಗದಂತೆ ನಡೆದುಕೊಂಡು ಬರುತ್ತಿದೆ.

ಕರ್ನಾಟಕದ ರಾಜರು

ಕ್ರಿಸ್ತಪೂರ್ವದಲ್ಲಿ ಕರ್ನಾಟಕದ ಉತ್ತರ ಭಾಗವನ್ನು ನಂದರೂ ಮೌರ್ಯರೂ ಆಳಿರಬೇಕು. ನಂದಚಂದ್ರಗುಪ್ತ ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ಶ್ರುತಕೇವಲಿ ಭದ್ರಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ನೆಲಸಿ ತಪವೆಸಗಿದನೆಂದು ಈ ಹಿಂದೆ ಹೇಳಿದೆ. ಇವನ ಮೊಮ್ಮಗ ಮೌರ್ಯ ಚಂದ್ರಗುಪ್ತನು ಕಟ್ಟಿಸಿದ ಬಸದಿ ಈಗಲೂ ಶ್ರವಣಬೆಳಗುಳದಲ್ಲಿದೆ. ಚಂದ್ರಗುಪ್ತನ ಮೊಮ್ಮಗನಾದ ಅಶೋಕನ ಶಾಸನಗಳು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೋಕಿನ ಬ್ರಹ್ಮಗಿರಿ ಜಟ್ಟಿಂಗ ರಾಮೇಶ್ವರ ಮತ್ತು ಸಿದ್ಧಾಪುರ ಈ ಸ್ಥಳಗಳಲ್ಲಿ ದೊರೆತಿವೆ. ಕ್ರಿ. ಪೂ. ಮೂರನೆಯ ಶತಮಾನದ ಈ ಶಾಸನಗಳು ಕರ್ನಾಟಕದ ಮೇಲಿದ್ದ ಮೌರ್ಯರ ವರ್ಚಸ್ಸನ್ನು ಸೂಚಿಸುವುದಿಲ್ಲವೆ ?

ಅಶೋಕನ ನಂತರ ಮೌರ್ಯರು ನಿರ್ವೀರ್ಯರಾಗಿ ಶುಂಗವಂಶ ಕೆಲಕಾಲ ರಾಜ್ಯವಾಳಿತು. ಅನಂತರ ಶುಂಗಭೃತ್ಯರು ಕರ್ಣವಂಶವನ್ನು ಸ್ಥಾಪಿಸಿ ದರು. ಈ ವಂಶದ ಅರಸನನ್ನು ಸಾತವಾಹನರು ಕೊಂದು ತಮ್ಮ ರಾಜ್ಯ ವನ್ನು ಸ್ಥಾಪಿಸಿದರು. ಇವರು ನಾಲ್ಕುನೂರ ಅರವತ್ತು ವರ್ಷಕಾಲ ದಕ್ಷಿಣಾ ಪಥವನ್ನು ಆಳಿದರು. ಈ ವಂಶದಲ್ಲಿ ಮೂವತ್ತು ಮಂದಿ ರಾಜರಾಗಿ ಹೋದರು. ಅಶೋಕನ ಕಾಲದಲ್ಲಿ ಇವರು ಬೌದ್ಧಮತವನ್ನು ಅನುಸರಿಸಿ ದರು. ಅನಂತರ ಬ್ರಾಹ್ಮಣ ಧರ್ಮವನ್ನು ಅವಲಂಬಿಸಿದರು. ಕ್ರಿ. ಪೂ. ಎರಡನೆಯ ಶತಮಾನದಲ್ಲಿ ಯಜ್ಞಯಾಗಗಳನ್ನು ಈ ಅರಸರು ಮಾಡಿದರು. ಕಳಿಂಗದ ಖಾರವೇಲನು ಸಾತವಾಹನರನ್ನು ಸೋಲಿಸಿದನು. ದಕ್ಷಿಣಾಪಥವ ನ್ನಾಳಿದ ಇವರ ಶಾಸನಗಳು ಕರ್ನಾಟಕದಲ್ಲಿ ಹೆಚ್ಚಾಗಿ ದೊರೆಯುವುವು. ಇವರನ್ನು ಶಾಸನದಲ್ಲಿ 'ಕುಂತಳಸ್ವಾಮಿ'ಗಳೆಂದು ಕರೆದಿದೆ. ಮಳವಳ್ಳಿಯಲ್ಲಿ ಸಾತವಾಹನರ ಒಂದು ದಾನ ಶಾಸನವಿದೆ. ಇದರಿಂದ ಕರ್ನಾಟಕವನ್ನೂ ಆಳಿದರೆಂದು ಹೇಳಬಹುದು. ಶಾಲಿವಾಹನ ಶಕವನ್ನು ಪ್ರಾರಂಭಿಸಿದವನು ಅದೇ ಹೆಸರಿನ ಸಾತವಾಹನ ದೊರೆಯೇ.

ಬನವಾಸಿಯ ಕದಂಬರು

ಶಾಲಿವಾಹನರ ನಂತರ ಕರ್ನಾಟಕದಲ್ಲಿ ಕದಂಬವಂಶ ತಲೆಯೆತ್ತಿತು.


ಇವರನ್ನು ಸಾತವಾಹನರ ಉತ್ತರಾಧಿಕಾರಿಗಳೆನ್ನಬಹುದು. ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಇವರ ರಾಜಧಾನಿ. ಕ್ರಿ. ಪೂ. ಮೂರನೆಯ ಶತಮಾನ ದಿಂದ ಕ್ರಿ. ಶ. ಎರಡನೆಯ ಶತಮಾನದ ತನಕ (ಐನೂರು ವರ್ಷ) ಕದಂಬರು ತಮ್ಮ ಪ್ರಭಾವವನ್ನು ಬೀರಿದರು. ಮಯೂರಶರ್ಮನು (ಕ್ರಿ. ಶ. ೨೮೦-೩೩೦) ಈ ವಂಶದ ಮೂಲಪುರುಷನೆಂದು ತಾಳಗುಂದದ ಶಾಸನದಲ್ಲಿ ಹೇಳಿದೆ. ಕದಂಬರು ಬ್ರಾಹ್ಮಣರು. ಈ ವಂಶದ ಮೃಗೇಶವರ್ಮನು ಅಶ್ವ ಮೇಧಯಾಗವನ್ನು ಮಾಡಿದನು (ಕ್ರಿ.ಶ. ೪೭೫-೪೯೦). ಕದಂಬರು ಸುವರ್ಣ ನಾಣ್ಯಗಳನ್ನು ಟಂಕಿಸಿದರು. ಇವನ್ನು 'ಪದ್ಮಟಂಕ' ನಾಣ್ಯವೆನ್ನುತ್ತಿದ್ದರು. ಇವರು ಬ್ರಾಹ್ಮಣರಾದರೂ ಅಂದಿನ ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ಕೊಟ್ಟರು.

ಗಂಗವಂಶ

ಜೈನಾಚಾರ್ಯರಾದ ಸಿಂಹನಂದಿಗಳ ಆಶೀರ್ವಾದ ಬಲದಿಂದ ದೀಡಿಗ ಮತ್ತು ಮಾಧವರೆಂಬ ಸೋದರರು (ಕ್ರಿ. ಶ. ೩೫೦) ಗಂಗರಾಜ್ಯವನ್ನು ಸ್ಥಾಪಿಸಿದರು.

ಗಂಗರು ಸುಮಾರು ೭೦೦ ವರ್ಷಗಳ ಕಾಲ (ಕ್ರಿ. ಶ. ೩೫೦-೧೦೨೪) ಕರ್ನಾಟಕವನ್ನು ಆಳಿದರು. ರಾಷ್ಟ್ರಕೂಟರ ಸಾಮಂತರಾಗಿ, ಬಂಧುಗಳಾಗಿ, ಕೊನೆಗೆ ರಾಷ್ಟ್ರಕೂಟ ಪ್ರತಿಷ್ಠಾಚಾರ್ಯರಾಗಿ ಗಂಗರಾಜರು ಜಗದ್ವಿಖ್ಯಾತ ರಾದರು. ಇವರಲ್ಲಿ ದುರ್ವಿನೀತನು (ಕ್ರಿ. ಶ. ೫೪೦-೬೦೦) ಗಂಗರಾಜರಲ್ಲಿ ಇತಿಹಾಸ ಪ್ರಸಿದ್ಧನೂ ವಿದ್ಯಾಪಕ್ಷಪಾತಿಯೂ ಆದ ರಾಜನು. ರಾಷ್ಟ್ರ ಕೂಟ ಚಕ್ರವರ್ತಿ ನೃಪತುಂಗನು ತನ್ನ ಮಗಳಾದ ಚಂದ್ರಲಬ್ಬೆಯನ್ನು ಗಂಗಬೂತುಗನಿಗೆ ಧಾರೆಯೆರೆದನು. ಅಂದಿನಿಂದ ಈ ರಾಜಮನೆತನಗಳಲ್ಲಿ ಕೊಳುಕೊಡುಗೆ ಪ್ರಾರಂಭವಾಯಿತು. ಗಂಗಮಾರಸಿಂಹನು ಅಂದಿನ ಕ್ಷತ್ರಿಯ ರಲ್ಲಿ ಅಪ್ರತಿಮ ವೀರನಾಗಿದ್ದನು (ಕ್ರಿ. ಶ. ೯೬೦-೯೭೩); ಉದಾರಚರಿತನೂ, ಧರ್ಮಪರಾಯಣನೂ ಆಗಿ ಮಾರಸಿಂಹನು ಕೊನೆಯಲ್ಲಿ ಸಲ್ಲೇಖನ ವ್ರತ ತೆಗೆದುಕೊಂಡು ಸಮಾಧಿ ಮರಣವನ್ನು ಪಡೆದನು.

ಗಂಗರಾಜರು ಜೈನರಾದರೂ ಅಂದಿನ ಎಲ್ಲ ಧರ್ಮಗಳನ್ನೂ ಸಮ ನಾಗಿ ಕಂಡು ಪ್ರೋತ್ಸಾಹಿಸಿದರು. ಶ್ರವಣಬೆಳಗೊಳದ ಗೋಮಟ ನಿರ್ಮಾಣ ವಾದುದು ಗಂಗರಾಚಮಲ್ಲನ ಕಾಲದಲ್ಲಿ. ಮಾರಸಿಂಹನ ನಂತರ ಗಂಗರಾಜ್ಯ



ಗೋಮಟವಿಗ್ರಹ, ಶ್ರವಣಬೆಳಗೊಳ

ದುರ್ಬಲವಾಯಿತು. ಇನ್ನೊಂದು ಕಡೆ ರಾಷ್ಟ್ರಕೂಟ ಸಾಮ್ರಾಜ್ಯ ಮುಳುಗಿ ಹೋಯಿತು. ಚೋಳರೂ ಚಾಲುಕ್ಯರೂ ಪ್ರಬಲರಾದರು. ಕ್ರಿ. ಶ. ೧೦೦೪ರಲ್ಲಿ ಚೋಳರ ರಾಜೇಂದ್ರನು ಗಂಗ ರಾಜಧಾನಿ ತಲಕಾಡನ್ನು ಆಕ್ರಮಿಸಿಕೊಂಡನು. ಚಾಲುಕ್ಯರಲ್ಲಿ ಪ್ರಖ್ಯಾತನಾದ ವಿಕ್ರಮಾಂಕನ (ಕ್ರಿ. ಶ. ೧೦೭೫–೧೧೨೬) ತಾಯಿ ಗಂಗವಂಶದವಳೆಂಬುದನ್ನು ನಾವು ಮರೆಯಬಾರದು.

ಬಾದಾಮಿ ಚಾಲುಕ್ಯರು


ಕನ್ನಡ ಚಕ್ರವರ್ತಿ ಪದವಿಗೆ ಪಾತ್ರರಾದವರಲ್ಲಿ ಮೊದಲಿಗರು ಬಾದಾಮಿ ಚಾಲುಕ್ಯರು. ಕ್ರಿ. ಶ. ೫೩೫ರಿಂದ ೭೪೭ರ ತನಕ ಈ ವಂಶವು ಕರ್ನಾಟಕವನ್ನು ಆಳಿದೆ. ಈ ವಂಶದ ಇಮ್ಮಡಿ ಪುಲಿಕೇಶಿಯು (ಕ್ರಿ. ಶ. ೬೦೯–೬೫೫) ಹರ್ಷವರ್ಧನನನ್ನು ನರ್ಮದಾತೀರದಲ್ಲಿ ಸೋಲಿಸಿ ದಕ್ಷಿಣಾಪಥೇಶ್ವರನೆನಿಸಿದನು. ಇಷ್ಟಾದರೂ ಇವನು ಪಲ್ಲವರಿಂದ ಹತನಾದನು. ಆದರೆ ಇವನ ಮಗನಾದ ಒಂದನೆಯ ವಿಕ್ರಮಾದಿತ್ಯನು (ಕ್ರಿ.ಶ. ೬೫೫–೬೮೧) ಗಂಗದುರ್ವಿನೀತನ ಸಹಾಯದಿಂದ ಪಲ್ಲವರನ್ನು ಸೋಲಿಸಿ ಕಾಂಚಿಯನ್ನು ಆಕ್ರಮಿಸಿ ಮುಯ್ಯಿಗೆ ಮುಯ್ಯಿ ತೀರಿಸಿದನು. ಇಮ್ಮಡಿ ಕೀರ್ತಿವರ್ಮನ ಕಾಲದಲ್ಲಿ (ಕ್ರಿ. ಶ. ೭೪೫–೭೪೭) ಹಿಂದೆಲ್ಲ ಸಾಮಂತರಾಗಿದ್ದ ರಾಷ್ಟ್ರಕೂಟರು ಪ್ರಬಲರಾಗಿ ಚಾಲುಕ್ಯರಾಜ್ಯವನ್ನು ಕಬಳಿಸಿದರು.

ಬಾದಾಮಿಯಲ್ಲಿರುವ ಗುಹಾಂತರ ದೇಗುಲಗಳು ಬಾದಾಮಿ ಚಾಲುಕ್ಯರ ಶಿಲ್ಪ ಸಾಮ್ರಾಜ್ಯವಾಗಿ ಈಗಲೂ ಕಂಗೊಳಿಸುತ್ತಿವೆ. ಪಟ್ಟದಕಲ್ಲು ಮತ್ತು ಐಹೊಳೆಯ ದೇವಾಲಯಗಳೂ ಚಾಲುಕ್ಯರ ವಾಸ್ತುಶಿಲ್ಪದ ಮಾದರಿಯಾಗಿವೆ.

ಮಾನ್ಯಖೇಟದ ರಾಷ್ಟ್ರಕೂಟರು

ಕನ್ನಡ ನಾಡಿನ ಚರಿತ್ರೆಯಲ್ಲಿ ರಾಷ್ಟ್ರಕೂಟರ ಕಾಲವು ಒಂದು ಉಜ್ವಲ ಯುಗವಾಗಿದೆ. ಬಾದಾಮಿ ಚಾಲುಕ್ಯರು ದಕ್ಷಿಣಾಪಥೇಶ್ವರರಾದರೆ ರಾಷ್ಟ್ರಕೂಟರು ಬಹುಮಟ್ಟಿಗೆ ಅಖಂಡ ಭಾರತದ ಚಕ್ರವರ್ತಿಗಳೆನಿಸಿದರು. ೨೫೦ ವರ್ಷ ಕಾಲ ಕರ್ನಾಟಕ ಧ್ವಜವನ್ನು ಈ ವಂಶವು ಆಸೇತು ಹಿಮಾಚಲದ ತನಕ ಮೆರೆಸಿತು.

ಮೊದಲು ರಾಷ್ಟ್ರಕೂಟರು ಆರನೆಯ ಶತಮಾನದಲ್ಲಿ ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದರು. ದಂತಿದುರ್ಗನ ಕಾಲದಲ್ಲಿ (೭೩೫–೭೫೫)



ವಿರೂಪಾಕ್ಷ ದೇವಾಲಯ, ಪಟ್ಟದ ಕಲ್ಲು



ದುರ್ಗ ದೇವಾಲಯ, ಐಹೊಳೆ



ಬಾದಾಮಿಯ ಮೊದಲನೆಯ ಗುಹೆ (ಶೈವಗುಹೆ) ನಟರಾಜನ ವಿಗ್ರಹ


ರಾಷ್ಟ್ರಕೂಟರು ಚಾಲುಕ್ಯರನ್ನು ಮೆತ್ತಗೆ ಮಾಡಿ ಸ್ವತಂತ್ರರಾದರು. ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ದಂತಿದುರ್ಗನೇ ಅಸ್ತಿವಾರ ಹಾಕಿದನು.

ದಂತಿದುರ್ಗನ ಮಗ ಒಂದನೆಯ ಕೃಷ್ಣನು (೭೫೬–೭೭೨) ಚಾಲುಕ್ಯ ರಾಜ್ಯವನ್ನು ಆಕ್ರಮಿಸಿದನು. ಗಂಗರನ್ನು ಸೋಲಿಸಿದನು. ಎಲ್ಲೋರದ ಗುಹಾಂತರ ದೇವಾಲಯುವನ್ನು (ಕೈಲಾಸದೇವಾಲಯುವನ್ನು) ಇವನ ಕಾಲದಲ್ಲಿಯೇ ನಿರ್ಮಿಸಿದ್ದು.

ರಾಷ್ಟ್ರಕೂಟರ ಧ್ರುವನಿರುಪಮನು (೭೮೦–೭೯೩) ಉತ್ತರ ಭಾರತದಲ್ಲಿ ದಿಗ್ವಿಜಯುವೆಸಗಿದನು. ಗಂಗಾ ಯಮುನಾ ನದಿಗಳೂ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ಸೇರಿಹೋದವು. ಇವನ ಮಗ ಮೂರನೆಯ ಗೋವಿಂದನು (೭೯೩–೮೧೪) ಹಿಮಾಲಯ ಪರ್ವತದ ತನಕ ದಂಡೆತ್ತಿಹೋಗಿ ದಾರಿಗುಂಟ ಇದ್ದ ರಾಜರನ್ನು ಸೋಲಿಸಿದನು. ಕರ್ನಾಟಕದ ಈ ಸಾಮ್ರಾಜ್ಯಕ್ಕೆ ರಾಮೇಶ್ವರವು ದಕ್ಷಿಣದ ಮೇರೆಯಾಗಿ ಹಿಮಾಲಯವು ಉತ್ತರದ ಮೇರೆಯಾಯಿತು ! ಸಿಂಹಳದ ರಾಜನು ತಾನಾಗಿಯೇ ಬಂದು ಶರಣಾಗತನಾದನಂ.

ರಾಷ್ಟ್ರಕೂಟರಲ್ಲಿ ವಿದ್ಯಾಪಕ್ಷಪಾತಿಯಾದ ಅಮೋಘವರ್ಷ ನೃಪತುಂಗನ ಹೆಸರು (೮೧೪–೮೮೦) ಕನ್ನಡಿಗರ ಉಸಿರಾಗಿದೆ. ಕನ್ನಡದ ಮೊಟ್ಟಮೊದಲ ಕೃತಿಯಾದ ಕವಿರಾಜಮಾರ್ಗವು ಇವನ ಸಮಕ್ಷಮದಲ್ಲೇ ರಚಿತವಾಯಿತು. ಜೈನ ಧಾರ್ಮಿಕ ಗ್ರಂಥಗಳಿಗೆ ಧವಳ ಜೈಧವಳ ಟೀಕೆಯನ್ನು ಇವನ ಕಾಲದಲ್ಲಿ ಬರೆಯಲಾಯಿತು. ವಿದ್ವಾಂಸರ ಪರಿಷತ್ತು ಇವನ ಸುತ್ತ ಸದಾ ಸೇರಿರುತ್ತಿತ್ತು. ಧರ್ಮವತ್ಸಲನಾದ ಇವನು ಅಹಿಂಸಾಧರ್ಮವನ್ನು ಪರಿಪಾಲಿಸಿಕೊಂಡು ೬೦ ವರ್ಷ ರಾಜ್ಯವಾಳಿದನು. ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗದಲ್ಲಿ ರಾಷ್ಟ್ರಕೂಟವಂಶವು ಇವನ ಕಾಲದಲ್ಲಿ ಅತ್ಯುನ್ನತಿಗೇರಿತು. ಆದರೆ ಉತ್ತರ ಭಾರತವು ಇವನ ಕೈತಪ್ಪಿಹೋಯಿತು.

ಮೂರನೆಯ ಕೃಷ್ಣರಾಜನು (೯೩೯–೯೬೭) ರಾಷ್ಟ್ರಕೂಟರಲ್ಲಿ ಸಮರ್ಥನಾದ ದೊರೆಯೆನಿಸಿದನು. ಗಂಗರು ಇವನಿಗೆ ಬಲಗೈಯಾಗಿ ರಾಷ್ಟ್ರಕೂಟ ಸಾಮ್ರಾಜ್ಯದ ಪ್ರಭಾವ ಹೆಚ್ಚಿಸಿದರು. ಇವನು ಉತ್ತರ ಭಾರತದ ದಿಗ್ವಿಜಯವೆಸಗಿದನು. ದಕ್ಷಿಣಾಪಥದಲ್ಲಿ ರಾಷ್ಟ್ರಕೂಟರ ಪ್ರಭಾವವನ್ನು ಇವನು ಭದ್ರಪಡಿಸಿದನು.



ಕೈಲಾಸನಾಥ ದೇವಾಲಯ, ಎಲ್ಲೋರ

ರಾಷ್ಟ್ರಕೂಟ ಖೊಟ್ಟಿಗನ ಕಾಲದಲ್ಲಿ (೯೬೭–೯೭೨) ರಾಜಧಾನಿ ಮಾನ್ಯಖೇಟವನ್ನು ಪರಮಾರ ಸೇನೆಗಳು ಮುತ್ತಿ ಕೊಳ್ಳೆಹೊಡೆದವು. ರಾಷ್ಟ್ರಕೂಟರ ಪತನ ಪ್ರಾರಂಭವಾಯಿತು. ಇಮ್ಮಡಿ ಕರ್ಕನ ಕಾಲದಲ್ಲಿ (೯೭೨–೯೭೩) ರಾಷ್ಟ್ರಕೂಟ ಸಾಮ್ರಾಜ್ಯವನ್ನು ಚಾಲುಕ್ಯ ತೈಲಪನು ಆಕ್ರಮಿಸಿದನು. ರಾಷ್ಟ್ರಕೂಟವಂಶದ ಅವಶೇಷವಾದ ಇಂದ್ರರಾಜನು ೯೮೨ ರಲ್ಲಿ ಶ್ರವಣಬೆಳಗುಳದಲ್ಲಿ ಜಿನೇಂದ್ರನನ್ನು ಸ್ಮರಿಸುತ್ತ ಕಾಲವಾದನು.

ಕಲ್ಯಾಣದ ಚಾಲುಕ್ಯರು

ಇವರು ಬಾದಾಮಿ ಚಾಲುಕ್ಯರ ವಂಶಜರು. ೯೭೩ರಲ್ಲಿ ಈ ವಂಶದ ತೈಲಪನು ರಾಷ್ಟ್ರಕೂಟ ಸಾಮ್ರಾಜ್ಯವನ್ನು ಆಕ್ರಮಿಸಿ ಚಕ್ರವರ್ತಿಯಾದನು. ಚೋಳ, ಮಾಳವ, ಕೊಂಕಣ ನಾಡುಗಳನ್ನು ಗೆದ್ದು ಇವನು ತನ್ನ ರಾಜ್ಯ ವನ್ನು ನರ್ಮದೆಯ ತನಕ ವಿಸ್ತರಿಸಿದನು. ಇವನ ಮಗನೇ ರನ್ನಕವಿಯ ಆಶ್ರಯದಾತನಾದ ಸತ್ಯಾಶ್ರಯ. ಉತ್ತರದ ಶಿಲಾಹಾರರನ್ನೂ ದಕ್ಷಿಣದ ಚೋಳರನ್ನೂ ಸೋಲಿಸಿ ಜಗದ್ವಿಖ್ಯಾತನಾದನು. ಈ ವಂಶದ ಇಮ್ಮಡಿ ಜಯಸಿಂಹನ ಕಾಲದಲ್ಲಿ ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆಯಿತು.

ಚಾಲುಕ್ಯರ ಒಂದನೆಯ ಸೋಮೇಶ್ವರನು (೧೦೪೩–೧೦೬೮) ಚೋಳ ರೊಡನೆ ಹೋರಾಡಿ ಸೋಲನ್ನು ಅನುಭವಿಸಬೇಕಾಯಿತು. ಅನಂತರ ಚೇತ ರಿಸಿಕೊಂಡು ಚೋಳರಾಜಧಾನಿ ಕಾಂಚಿಯನ್ನು ಆಕ್ರಮಿಸಿದನು. ಆದರೆ ಮತ್ತೊಮ್ಮೆ ಚೋಳರಿಗೆ ಇವನು ಸೋತು ಪಲಾಯನವೆಸಗಬೇಕಾಯಿತು. ಹೀಗೆ ಹಲವಾರು ಬಾರಿ ಚೋಳರೊಡನೆ ಸೆಣಸಿ ಸೋಮೇಶ್ವರನು ಸೋತು ಸುಣ್ಣವಾದನು.

ಆರನೆಯ ವಿಕ್ರಮಾದಿತ್ಯನು ಚಾಲುಕ್ಯವಂಶದಲ್ಲಿ ಕಿರೀಟಪ್ರಾಯನಾಗಿ ದ್ದನು (೧೦೭೬–೧೧೨೬). ಮಹಾ ಪರಾಕ್ರಮಿಯಾದ ಇವನು ತನ್ನ ಸೋದರರನ್ನು ಸೋಲಿಸಿ ಸಿಂಹಾಸನವನ್ನು ಆಕ್ರಮಿಸಿದನು. ಸಾಮಂತ ರನ್ನೆಲ್ಲ ಹೆದರಿಸಿ ಹದಕ್ಕೆ ತಂದನು. ಇವನು ನರ್ಮದಾನದಿಯನ್ನು ದಾಟಿ ಕರ್ನಾಟಕ ಸಾಮ್ರಾಜ್ಯದ ಎಲ್ಲೆಯನ್ನು ವಿಸ್ತರಿಸಿದನು. ಇವನನ್ನು ದಕ್ಷಿಣಾ ಪಥೇಶ್ವರನೆಂದು ಧಾರಾಳವಾಗಿ ಹೇಳಬಹುದು. ಸರ್ವಧರ್ಮಗಳಿಗೂ ಇವನು ಪ್ರೋತ್ಸಾಹ ಕೊಟ್ಟನು. ವಿದ್ಯಾಪಕ್ಷಪಾತಿಯಾದ ಇವನು ಕಾಶ್ಮೀರದ ಬಿಲ್ಹಣನಿಗೆ ಆಶ್ರಯ ನೀಡಿದನು. ಬಿಲ್ಹಣನು ವಿಕ್ರಮಾಂಕಚರಿತೆಯನ್ನು ರಚಿಸಿ ಇವನ ಇತಿಹಾಸವನ್ನು ಉಜ್ವಲಗೊಳಿಸಿರುವನು.



ಚಾಲುಕ್ಯಶಿಲ್ಪ : ಶಾಸನಸುಂದರಿ, ಜಲಸಂಗವಿ

ವಿಕ್ರಮಾದಿತ್ಯನ ನಂತರ ಚಾಲುಕ್ಯವಂಶ ದುರ್ಬಲವಾಯಿತು. ಹೊಯ್ಸಳರು ಪ್ರಬಲರಾದರು. ೧೧೫೬ರಲ್ಲಿ ಚಾಲುಕ್ಯರ ಸಾಮಂತರಾಗಿದ್ದ ಕಳಚೂರ್ಯರು ಪ್ರಬಲರಾದರು. ಈ ವಂಶದ ಬಿಜ್ಜಳನು ಚಾಳುಕ್ಯ ರಾಜ್ಯವನ್ನು ಆಕ್ರಮಿಸಿದನು. ಅದೇ ಕಾಲದಲ್ಲಿ ವೀರಶೈವಧರ್ಮದ ಕ್ರಾಂತಿಯಾಯಿತು. ಕಳಚೂರ್ಯರು ಬಹುಕಾಲ ಸಾರ್ವಭೌಮರಾಗಿರಲಿಲ್ಲ. ಬಿಜ್ಜಳನು ೧೧೬೮ರಲ್ಲಿ ಮತೀಯ ಕ್ರಾಂತಿಯಲ್ಲಿ ಕೊಲೆಯಾದನು, ಅನಂತರ ಈ ವಂಶ ದುರ್ಬಲವಾಯಿತು.

ದ್ವಾರಸಮುದ್ರದ ಹೊಯ್ಸಳರು

ಹೊಯ್ಸಳರು ಜೈನಾಚಾರ್ಯನ ಅನುಗ್ರಹದಿಂದ ರಾಜ್ಯವನ್ನೇ ಸ್ಥಾಪಿಸಿದರು. ಕ್ರಿ. ಶ. ೯೦೩ರಿಂದ ೧೩೪೬ರ ತನಕ ಈ ವಂಶವು ಕರ್ನಾಟಕವನ್ನು ಆಳಿತು. ಸಳನು ಈ ವಂಶಸ್ಥಾಪಕ. ಸಣ್ಣ ಪಾಳೆಯಪಟ್ಟಾಗಿ ಪ್ರಾರಂಭವಾದ ಆಡಳಿತ ಬರುಬರುತ್ತ ಸಾಮ್ರಾಜ್ಯವಾಗಿ ಮೆರೆಯಿತು. ಬಹುಕಾಲ ಈ ವಂಶದ ಅರಸರು ಚಾಲುಕ್ಯರ ಸಾಮಂತರಾಗಿ ಬಾಳಿದರು.

ಇಮ್ಮಡಿ ವಿನಯಾದಿತ್ಯ ಹೊಯ್ಸಳನು (೧೦೪೭–೧೧೦೦) ಚಾಲುಕ್ಯರ ದಂಡನಾಯಕನಾಗಿ ಮಾಳವರನ್ನು ಸೋಲಿಸಿದನು. ಇವನೂ ಇವನ ಮಗನಾದ ಎರೆಯಂಗನೂ ಉತ್ಕಟ ಜಿನಭಕ್ತರಾಗಿದ್ದರು. ಎರೆಯಂಗನ ಮಗನೇ ಇತಿಹಾಸ ಪುರುಷನಾದ ವಿಷ್ಣುವರ್ಧನ (೧೧೧೧–೧೧೪೧). ಇವನು ಚೋಳರನ್ನು ಸೋಲಿಸಿ ತಲಕಾಡುಗೊಂಡನೆನಿಸಿದನು. ಮಲೆಯಾಳವನ್ನು ಇವನು ಗೆದ್ದನು. ರಾಮೇಶ್ವರದ ತನಕ ದಿಗ್ವಿಜಯವೆಸಗಿದನು. ಚಾಲುಕ್ಯರ ಪ್ರಭಾವ ಕುಗ್ಗುತ್ತ ಬಂದಿತು. ಕದಂಬರನ್ನೂ, ಪಾಂಡ್ಯರನ್ನೂ ವಿಷ್ಣುವರ್ಧನನು ಸೋಲಿಸಿದನು. ಹೊಯ್ಸಳ ಸಾಮ್ರಾಜ್ಯಕ್ಕೆ ಭದ್ರವಾದ ಅಸ್ತಿವಾರವನ್ನು ಹಾಕಿದನು. ಹಿಂದೆಲ್ಲ ಜೈನಧರ್ಮವನ್ನು ಅನುಸರಿಸಿದ ಈ ವಂಶವು ವಿಷ್ಣುವರ್ಧನನ ಕಾಲದಲ್ಲಿ ವೈಷ್ಣವ ಧರ್ಮದ ಪ್ರಭಾವಕ್ಕೊಳಗಾಯಿತು. ಅನ್ಯಧರ್ಮಗಳನ್ನು ದ್ವೇಷಿಸದೆ ವಿಷ್ಣುವರ್ಧನನು ರಾಮಾನುಜರ ಶಿಷ್ಯನಾದನು. ಇವನ ಪ್ರಾಣಪ್ರಿಯೆಯಾದ ಶಾಂತಲ ಕೊನೆತನಕ ಜೈನಧರ್ಮವನ್ನೇ ಅನುಸರಿಸಿದಳು. ವಿಷ್ಣುವರ್ಧನನ ಮತೀಯ ಔದಾರ್ಯಕ್ಕೆ ಈ ಘಟನೆ ಸಾಕ್ಷಿಯಾಗಿದೆ.

ವಿಷ್ಣುವರ್ಧನನು ಮಹಾಸಾಹಸಿ ; ಮಿಗಿಲಾಗಿ ರಾಜನೀತಿ ಚತುರ.

ಶಿಲ್ಪಕಲೆಗೆ ಇವನು ಕೊಟ್ಟ ಪ್ರೋತ್ಸಾಹಕ್ಕೆ ಎಣೆಯೇ ಇಲ್ಲ. ಬೇಲೂರಿನ ಚನ್ನಕೇಶವ ದೇವಾಲಯವು ಇವನ ಕಲಾಭಿರುಚಿಗೆ ಜೀವಂತ ಸಾಕ್ಷಿಯಾಗಿದೆ. ಮಹಾಪುರುಷನಾದ ವಿಷ್ಣುವರ್ಧನನು ೧೧೪೧ರಲ್ಲಿ ಕಾಲವಾದನು. ಇವನು ಗಳಿಸಿದ ಕೀರ್ತಿ, ಇವನ ಸಾಧನೆ, ಇವನ ಸಿದ್ಧಿ ಇವು ಎಂದೂ ನಾಶವಾಗುವಂತಿಲ್ಲ.

ವೀರಬಲ್ಲಾಳ

ವಿಷ್ಣುವರ್ಧನನ ಮೊಮ್ಮಗನಾದ ವೀರಬಲ್ಲಾಳನು ವಿಷಯಲಂಪಟನಾಗಿದ್ದ ತನ್ನ ತಂದೆಯಿಂದ ರಾಜ್ಯವನ್ನು ಕಸಿದುಕೊಂಡನು. ಸಾಹಸಿಯಾದ ಇವನು ಯಾದವರ ಸೊಕ್ಕನ್ನು ಮುರಿದನು. ಪಶ್ಚಿಮ ಚಾಳುಕ್ಯರ ಸಾರ್ವಭೌಮಾಧಿಕಾರವನ್ನೂ ಕೊನೆಗಾಣಿಸಿ ತಾನೇ ಚಕ್ರವರ್ತಿಯಾದನು. ಕೃಷ್ಣಾನದಿಯ ತನಕ ರಾಜ್ಯವನ್ನು ವಿಸ್ತರಿಸಿದನು. ಇವನ ಕಾಲದಲ್ಲಿ ಜಿನಾಲಯಗಳೂ ಕೇಶವ ದೇವಾಲಯಗಳೂ ಶಿವಾಲಯಗಳೂ ಅನೇಕ ಕಡೆ ನಿರ್ಮಾಣವಾದವು.

ವೀರಬಲ್ಲಾಳನ ಮಗನಾದ ಇಮ್ಮಡಿ ನರಸಿಂಹನು (೧೨೭೧-೧೨೩೫) ಚೋಳರನ್ನೂ ಪಾಂಡ್ಯರನ್ನೂ ಪಲ್ಲವರನ್ನೂ ಸೋಲಿಸಿದನು. ಕಾಂಚಿ ಇವನ ವಶವಾಯಿತು. ವಾಸ್ತುಶಿಲ್ಪಕ್ಕೆ ಇವನು ಪ್ರೋತ್ಸಾಹ ಕೊಟ್ಟನು. ಇವನ ಮಗನಾದ ಸೋಮೇಶ್ವರನು (೧೨೩೪-೧೨೬೨) ದಕ್ಷಿಣದಲ್ಲಿ ದಿಗ್ವಿಜಯ ನಡೆಸಿ ರಾಮೇಶ್ವರದಲ್ಲಿ ಜಯಸ್ತಂಭ ನಟ್ಟನು. ತಮಿಳುನಾಡಿನಲ್ಲಿ ಇವನು ಕಣ್ಣನೂರನ್ನು ನಿರ್ಮಿಸಿ ರಾಜಧಾನಿಯಾಗಿ ಮಾಡಿಕೊಂಡನು. ಕೊಡುಗೈ ದಾನಿಯಾದ ಇವನು ಸಂಪತ್ತನ್ನೆಲ್ಲ ದಾನಮಾಡಿ ಸಾರ್ವಭೌಮನೆನಿಸಿದನು. ಇವನ ನಂತರ ಹೊಯ್ಸಳ ಸಾಮ್ರಾಜ್ಯ ಇವನ ಮಕ್ಕಳಲ್ಲಿ ಇಬ್ಭಾಗವಾಯಿತು. ದ್ವಾರಸಮುದ್ರದಲ್ಲಿ ಮುಮ್ಮಡಿ ನಾರಸಿಂಹನು ದೊರೆಯಾದನು. ಇವನ ತಮ್ಮ ವೀರರಾಮನಾಥನು ಕಣ್ಣನೂರಿನಲ್ಲಿ ಸಿಂಹಾಸನವೇರಿದನು.

ಮುಮ್ಮಡಿ ನಾರಸಿಂಹ ಮತ್ತು ಅವನ ತಮ್ಮನಾದ ರಾಮನಾಥ ಇವರು ಒಂದಾಗಿ ಬಾಳದೆ ಸದಾ ಕಚ್ಚಾಡಿ ಹೊಯ್ಸಳ ಸಾಮ್ರಾಜ್ಯ ದುರ್ಬಲವಾಯಿತು. ಇವರಿಬ್ಬರ ಜಗಳದಿಂದ ಸುತ್ತಮುತ್ತಣ ಸಾಮಂತರು ಸ್ವತಂತ್ರರಾಗಲು ಅವಕಾಶ ದೊರೆಯಿತು. ಈ ಅವಾಂತರದ ನಡುವೆಯೂ

ಹೊಯ್ಸಳಶೈಲಿಯ ಸೋಮನಾಥಪುರದ ದೇವಾಲಯ ನಿರ್ಮಾಣವಾದುದು ಒಂದು ಸೋಜಿಗವೇ ಸರಿ.

ಮುಮ್ಮಡಿ ನಾರಸಿಂಹನ ಮಗನಾದ ಮುಮ್ಮಡಿ ಬಲ್ಲಾಳನು ಹೊಯ್ಸಳ ಸಾಮ್ರಾಜ್ಯವನ್ನು ಒಂದುಗೂಡಿಸಿ ಆಳಿದನು (೧೨೯೨–೧೩೪೨). ದಂಗೆಯೇಳಲು ಪ್ರಯತ್ನಿಸಿದ ಸಾಮಂತರನ್ನು ನಿಗ್ರಹಿಸಿದನು. ಯಾದವರನ್ನು ಸೋಲಿಸಿದನು. ಆದರೆ ಮತ್ತೆ ಮತ್ತೆ ಮುಸಲ್ಮಾನರು ಹೊಯ್ಸಳರಮೇಲೆ ದಂಡೆತ್ತಿ ಬಂದರು. ೧೩೧೦ರಲ್ಲಿ ಮಲ್ಲಿಕ್‌ಕಾಫರನು ದ್ವಾರಸಮುದ್ರವನ್ನು ಮುತ್ತಿ ಬಲ್ಲಾಳನನ್ನು ಸೆರೆಹಿಡಿದನು. ಮೂರುವರ್ಷದನಂತರ ಬಿಡುಗಡೆಯಾಯಿತು. ಮತ್ತೆ ಎರಡು ಬಾರಿ ಮಹಮದೀಯರು ಹೊಯ್ಸಳರಾಜ್ಯಕ್ಕೆ ದಾಳಿಯಿಟ್ಟರು. ೧೩೪೨ರಲ್ಲಿ ಮಹಮದೀಯರ ಮೇಲೆ ಹೋರಾಡುತ್ತ ಬಲ್ಲಾಳನು ಸತ್ತುಹೋದನು. ಇಲ್ಲಿಗೆ ಹೊಯ್ಸಳ ಸಾಮ್ರಾಜ್ಯದ ಕಥೆ ಮುಗಿಯಿತು. ಸರ್ವಧರ್ಮಗಳಿಗೂ ಪ್ರೋತ್ಸಾಹಕೊಟ್ಟು, ಕಲೆ ಮತ್ತು ಸಾಹಿತ್ಯವನ್ನು ಬೆಳೆಸಿ ಹೊಯ್ಸಳವಂಶವು ಕೀರ್ತಿಶೇಷವಾಯಿತು. ಹಳೇಬೀಡು, ಬೇಲೂರು, ಸೋಮನಾಥಪುರ ಇಲ್ಲೆಲ್ಲ ಇರುವ ಹೊಯ್ಸಳ ದೇವಾಲಯಗಳು ಈ ಸಾಮ್ರಾಜ್ಯದ ಗತವೈಭವಕ್ಕೆ ಮೂಕ ಸಾಕ್ಷಿಯಾಗಿವೆ.

ವಿಜಯನಗರ ಸಾಮ್ರಾಜ್ಯ


ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರು ವಿದ್ಯಾರಣ್ಯರ ಅನುಗ್ರಹದಿಂದ ವಿಜಯನಗರ ಸಾಮ್ರಾಜ್ಯವನ್ನು ೧೪ನೆಯ ಶತಮಾನದ ಮಧ್ಯಭಾಗದಲ್ಲಿ ಸ್ಥಾಪಿಸಿದರು. ಇದಕ್ಕೆ ಹಿಂದೆ ಈ ಮನೆತನವು ಹೊಯ್ಸಳರ ಸಾಮಂತ ಮನೆತನವಾಗಿತ್ತು. ಹೊಯ್ಸಳರ ಪತನವಾದಮೇಲೆ ಇದು ಸ್ವತಂತ್ರವಾಯಿತು. ಇಮ್ಮಡಿ ಹರಿಹರನ ಕಾಲದಲ್ಲಿ (೧೩೭೮–೧೪೦೪) ಬಹಮನಿ ಸುಲ್ತಾನರು ವಿಜಯನಗರದ ಮೇಲೆ ಧಾಳಿಯೆಸಗಿದರು. ಇವನ ನಂತರ ಇವನ ಮಕ್ಕಳಲ್ಲಿ ಯಾದವೀಕಲಹ ಪ್ರಾರಂಭವಾಯಿತು. ಕೊನೆಗೆ ಒಂದನೆಯ ದೇವರಾಯನು ಪಟ್ಟಕ್ಕೆ ಬಂದನು. ಇವನು ಬಹಮನಿ ಸುಲ್ತಾನರನ್ನು ಸೋಲಿಸಿದನು. ಇವನ ಕಾಲದಲ್ಲಿ ಇಟಲಿ ದೇಶದ ಪ್ರವಾಸಿ ನಿಕೋಲೋಕೊಂತಿ ಎಂಬುವನು ವಿಜಯನಗರದಲ್ಲಿ ಕೆಲಕಾಲ ತಂಗಿದ್ದನು. ೧೪೨೨ರಲ್ಲಿ ದೇವರಾಯನು ಕಾಲವಾದನು. ಅನಂತರ ಬಹಮನಿ ರಾಜನು ದಂಡೆತ್ತಿ ಬಂದು ವಿಜಯನಗರವನ್ನು ಕೊಳ್ಳೆಹೊಡೆದನು.




ಹೊಯ್ಸಳ ಶಿಲ್ಪ : ನಾಟ್ಯ ಸರಸ್ವತಿ, ಹಳೇಬೀಡು

ಒಂದನೆಯ ದೇವರಾಯನ ಮಗ ಪ್ರೌಢದೇವರಾಯನು ೧೪೨೬ರಲ್ಲಿ ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ ವಿಜಯನಗರದ ಕೀರ್ತಿ ಕೊನರಿತು. ಕಳಿಂಗ, ಕೇರಳಗಳ ಮೇಲೆ ದಿಗ್ವಿಜಯವೆಸಗಿ ಮಹಾಸಾಹಸಿಯೆನಿಸಿದನು. ಪಾರಸೀ ದೇಶದ ರಾಯಭಾರಿಯಾದ ಅಬ್ದುಲ್‌ರಜ್ಜಾಕ್ ಪ್ರೌಢದೇವ ರಾಯನನ್ನು ದಕ್ಷಿಣ ಭಾರತದ ಸಾರ್ವಭೌಮನೆಂದು ಕರೆದಿರುವನು. ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಕವಿಗಳು ಇವನನ್ನು ಕೊಂಡಾಡಿರುವರು. ಹೇರಳವಾದ ಸಂಪತ್ತನ್ನು ಸತ್ಪಾತ್ರರಿಗೆ ದಾನಮಾಡಿ ದಾನಶೂರನೆನಿಸಿದನು. ಸರ್ವಧರ್ಮಗಳನ್ನೂ ಸಮನ್ವಯಗೊಳಿಸಿ ಮತೀಯ ಕಲಹಗಳಿಗೆ ಮುಕ್ತಾಯ ಹಾಡಿದನು. ಇವನನಂತರ ಈ ರಾಜ್ಯವು ಅಸಮರ್ಥರ ಕೈಸೇರಿತು. ಸುತ್ತಮುತ್ತಣ ಅರಸರು ವಿಜಯನಗರ ಸಾಮ್ರಾಜ್ಯವನ್ನು ಕೈಗೆ ಸಿಕ್ಕಷ್ಟು ಕಬಳಿಸಿದರು. ರಾಜವಂಶದಲ್ಲಿ ಯಾದವೀ ಕಲಹಗಳು ನಡೆದವು. ನಲವತ್ತು ವರ್ಷಕಾಲ ಈ ಸಾಮ್ರಾಜ್ಯಕ್ಕೆ ಮಂಕು ಒಡಿಯಿತು.

ವಿಜಯನಗರದ ಧವಳಕೀರ್ತಿ ಕೃಷ್ಣದೇವರಾಯನ ಕಾಲದಲ್ಲಿ (೧೫೦೯–೧೫೨೯) ಮತ್ತೊಮ್ಮೆ ಮುಗಿಲು ಮುಟ್ಟಿತು. ಇವನು ಸುತ್ತಮುತ್ತಣ ರಾಜರನ್ನು ಸೋಲಿಸಿ ದಕ್ಷಿಣಾಪಥೇಶ್ವರನಾದನು. ಆಂಧ್ರ ಮತ್ತು ತಮಿಳು ನಾಡುಗಳು ಇವನ ಅಂಕಿತಕ್ಕೆ ಬಂದವು. ಸಾಹಿತ್ಯಕ್ಕೂ, ಲಲಿತಕಲೆಗೂ ಇವನು ಜೀವ ತುಂಬಿದನು. ಹಾಸ್ಯಗಾರ ತೆನಾಲಿ ರಾಮಕೃಷ್ಣನು ಈ ಕಾಲದಲ್ಲಿ ಹಾಸ್ಯದ ಮಳೆ ಸುರಿಸಿದನು. ಕೃಷ್ಣದೇವರಾಯನು ಕವಿಯಾಗಿ, ಸಂಗೀತಗಾರನಾಗಿ, ಚಿತ್ರಕಾರನಾಗಿ, ಸಾಮ್ರಾಟನಾಗಿ ಲೋಕ ವಿಖ್ಯಾತನಾದನು. ಪುರಂದರದಾಸರೂ, ಕನಕದಾಸರೂ ವಿಜಯನಗರ ಸಾಮ್ರಾಜ್ಯದಲ್ಲಿ ಭಕ್ತಿಗೀತೆಗಳನ್ನು ಹಾಡಿದರು. ಕೃಷ್ಣದೇವರಾಯನ ನಂತರ ಅಳಿಯ ರಾಮರಾಯನು ಅಪ್ರಾಪ್ತವಯಸ್ಕನಾಗಿದ್ದ ಸದಾಶಿವನ ರಾಜ ಪ್ರತಿನಿಧಿಯಾಗಿ ಸಾಮ್ರಾಜ್ಯದ ಅಧಿಪತಿಯಾಗಿದ್ದನು. ಆದರೆ ಅವನು ಸಮರ್ಥನಾಗಿ ರಾಜ್ಯಭಾರ ಮಾಡಿದನು. ಬಹಮನಿ ಸುಲ್ತಾನರೊಡನೆ ನಡೆದಯುದ್ಧದಲ್ಲಿ ಸೋತನು. ಈ ಸೋಲು ವಿಜಯನಗರದ ಪತನದಲ್ಲಿ ಕೊನೆಗೊಂಡಿತು. ಪೋರ್ಚುಗೀಸರು ಸದಾ ವಿಜಯನಗರಕ್ಕೆ ಕಿರುಕುಳ ಕೊಡುತ್ತಿದ್ದರು. ಬಹಮನೀ ಸುಲ್ತಾನರು ಒಗ್ಗಟ್ಟಾದರು. ರಾಮ



ವಿಜಯವಿಠ್ಠಲ ಗುಡಿ, ಹಂಪೆ



ವಿಜಯವಿಠ್ಠಲ ಗುಡಿ ಕಲ್ಲುರಥ, ಹಂಪೆ

ರಾಯನ ಸೈನ್ಯದಲ್ಲಿದ್ದ ಮುಸಲ್ಮಾನರು ದ್ರೋಹಬಗೆದರು. ಇವುಗಳ ನಡು ವೆಯೂ ರಾಮರಾಯನು ದಕ್ಷಿಣ ಭಾರತದಲ್ಲಿ ಅಜೇಯನೆನಿಸಿ ಅರಿಭಯಂಕರ ನಾಗಿದ್ದನು. ಆದರೆ ಇವನ ೮೦ನೆಯ ವಯಸ್ಸಿನಲ್ಲಿ ಮಹಮದೀಯ ದೊರೆ ಗಳೆಲ್ಲ ಒಟ್ಟಾಗಿ ಇವನ ಮೇಲೆ ಬಿದ್ದರು. ರಾಮರಾಯನೇ ಬೆಳೆಸಿದ್ದ ಮಹ ಮದೀಯ ಸೇನಾನಿಗಳು ದ್ರೋಹವೆಸಗಿದರು. ೧೫೬೫ರಲ್ಲಿ ರಾಮರಾಯ ನನ್ನು ರಕ್ಕಸತಂಗಡಿ ರಣರಂಗದಲ್ಲಿ ಮಹಮದೀಯರು ಕೊಂದುಹಾಕಿ ದರು. ಇಲ್ಲಿಗೆ ವಿಜಯನಗರದ ಸಾಮ್ರಾಜ್ಯದ ಕಥೆ ಮುಗಿಯಿತು. ೧೩೩೦ ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯವು ೨೦೦ ವರ್ಷಕ್ಕೂ ಹೆಚ್ಚಾಗಿ ಕರ್ನಾಟಕದ ಕೀರ್ತಿಯನ್ನು ಬೆಳೆಸಿತು. ಸಾಹಿತ್ಯ, ಕಲೆ. ಶಿಲ್ಪಗಳಿಗೆ ಆಶ್ರಯ ನೀಡಿ ಅಮರವಾಯಿತು.

ಕೆಳದಿನಾಯಕರು

ವಿಜಯನಗರದ ಕೊನೆಯ ದೊರೆ ವೆಂಕಟಪತಿಯು ಓಡಿಹೋಗಿ ಕೆಳದಿ ಯಲ್ಲಿ ಆಶ್ರಯ ಪಡೆದು ಅಲ್ಲಿಯೇ ಅಸುನೀಗಿದನು. ವಿಜಯನಗರದನಂತರ ಹಿಂದು ಸಂಸ್ಕೃತಿಯನ್ನು ಕೆಳದಿ ಅರಸರು ರಕ್ಷಿಸಿದರು. ಸುಮಾರು ೨೨೫ ವರ್ಷ ಕೆಳದಿ ಮನೆತನ ರಾಜ್ಯವಾಳಿತು. ಶಿವಮೊಗ್ಗ ಜಿಲ್ಲೆಯಲ್ಲಿ ವರದಾ ನದಿಯ ದಂಡೆಯಲ್ಲಿರುವ ಕೆಳದಿಯು ಈ ಮನೆತನದ ಮೂಲನಿವಾಸ. ಸಣ್ಣ ಪಾಳೆಯಪಟ್ಟಾಗಿ ಪ್ರಾರಂಭವಾದ ಈ ರಾಜ್ಯ ವಿಜಯನಗರ ಪತನವಾದ ಮೇಲೆ ದಕ್ಷಿಣಭಾರತದಲ್ಲಿ ಎದ್ದು ಕಾಣುವ ವಿಸ್ತಾರವಾದ ರಾಜ್ಯವಾಯಿತು. ಚೌಡಪ್ಪ ಮತ್ತು ಭದ್ರಪ್ಪ ಸಹೋದರರು ೧೪೯೯ರಲ್ಲಿ ಈ ರಾಜ್ಯವನ್ನು ಸ್ಥಾಪಿಸಿದರು. ಚೌಡಪ್ಪನ ಮಗನಾದ ಸದಾಶಿವನಾಯಕನು (೧೫೩೦೪– ೧೫೪೬) ಕೃಷ್ಣದೇವರಾಯನ ಅನುಗ್ರಹಕ್ಕೆ ಪಾತ್ರನಾದನು, ಇವನು ತೀರ್ಥ ಯಾತ್ರೆ ಮಾಡುತ್ತ ದೆಹಲಿಗೆ ಹೋಗಿ ಅಲ್ಲಿ ಗರ್ವಿಯಾದ ಅಂಕುಶಖಾನ ನನ್ನು ದ್ವಂದ್ವಯುದ್ಧದಲ್ಲಿ ಕೊಂದು ಬಾದಶಹನಿಂದ ಸನ್ಮಾನಿತನಾದನು.

ಕೆಳದಿ ವಂಶದಲ್ಲಿ ಅತ್ಯಂತ ಸಮರ್ಥನಾದವನು ಶಿವಪ್ಪನಾಯಕ (೧೬೪೫–೧೬೬೧). ಕೆಳದಿ ವಂಶದ ಸುವರ್ಣಯುಗವಾಗಿತ್ತು ಇವನ ರಾಜ್ಯ ಭಾರದ ಕಾಲ. ಪೋರ್ಚುಗೀಸರು, ಡಚ್ಚರು ಮತ್ತು ಇಂಗ್ಲಿಷರು ಇವರು ಗಳ ಉಪಟಳವನ್ನು ಇವನು ಅಡಗಿಸಿದನು. ವಿಜಯನಗರದ ಶ್ರೀರಂಗ ನಾಯಕನಿಗೆ ಆಶ್ರಯ ಕೊಟ್ಟು ಮೈಸೂರು ಹಾಗು ಬಿಜಾಪುರದ ಸೈನ್ಯ

ಗಳನ್ನು ಸೋಲಿಸಿದನು. ಕೆಳದಿ ರಾಜ್ಯವನ್ನು ವಿಸ್ತರಿಸಿದನು. ಭೂಕಂದಾಯ ವ್ಯವಸ್ಥೆಗೊಳಿಸಿದನು. 'ಶಿವಪ್ಪನಾಯಕನ ಶಿಸ್ತು' ಎಂಬ ಮಾತು ಇಂದಿನ ತನಕ ಕನ್ನಡಿಗರ ಬಾಯಲ್ಲಿ ಜೀವಂತವಾಗಿದೆ. ವೈರಿ ಭಯಂಕರನಾದ ಶಿವಪ್ಪನಾಯಕನು ೧೬೬೦ರಲ್ಲಿ ವಾನಪ್ರಸ್ಥಾಶ್ರಮ ಸ್ವೀಕರಿಸಿ ಸಾಧಕ ನೆನಿಸಿದನು.

ಚೆನ್ನಮ್ಮಾಜಿ (೧೬೭೧–೧೬೭೯) ಎಂಬ ಹೆಂಗಸು ಕೆಳದಿಗೆ ಬಂದ ಆಪತ್ತುಗಳನ್ನು ತಪ್ಪಿಸಿ ತಾನೇ ರಾಜ್ಯಭಾರಮಾಡಿ ಶಕ್ತಿರೂಪಿಣಿಯೆನಿಸಿ ದಳು. ಔರಂಗಜೇಬನನ್ನೂ ಲೆಕ್ಕಿಸದೆ ಅವನ ಶತ್ರುವೂ ಶಿವಾಜಿಯ ಮಗನೂ ಆದ ರಾಜಾರಾಮನಿಗೆ ಆಶ್ರಯ ನೀಡಿದಳು. ಔರಂಗಜೇಬನ ಸೈನ್ಯವನ್ನು ಸೋಲಿಸಿ ವಿಖ್ಯಾತಳಾದಳು. ಇವಳು ಆಳಿದ್ದು ಕೇವಲ ಎಂಟು ವರ್ಷ ಮಾತ್ರ. ಅಲ್ಪಾಯುವಾದ ಈಕೆ ೧೬೭೪ರಲ್ಲಿ ಮೃತಳಾದಳು.

ಕೆಳದಿ ಬಸವನಾಯಕನು ಚೆನ್ನಮ್ಮಾಜಿಯ ದತ್ತು ಪುತ್ರ. ೩೫ ವರ್ಷ ರಾಜ್ಯಭಾರ ಮಾಡಿದನು. ವಿದ್ಯಾಪಕ್ಷಪಾತಿಯಾಗಿ ಕೀರ್ತಿವಂತನಾದನು. ಇವನ ಮಗ ಇಮ್ಮಡಿ ಸೋಮಶೇಖರನು (೧೭೧೪–೧೭೩೯) ದೆಹಲಿ ಬಾದ ಷಹನ ಕೋರಿಕೆಯಂತೆ ಮೈಸೂರು ಸೈನ್ಯವನ್ನು ಎದುರಿಸಿ ಸೋಲಿಸಿ ಸನ್ಮಾನಿತ ನಾದನು. ಇವನನಂತರ ಕೆಳದಿ ರಾಜ್ಯ ದುರ್ಬಲವಾಯಿತು.

ಮೈಸೂರಿನ ಒಡೆಯರು

ಮೈಸೂರು ರಾಜ್ಯ ಸಣ್ಣ ಪಾಳೆಯಪಟ್ಟಾಗಿ ಪ್ರಾರಂಭವಾಯಿತು. ವಿಜಯನಗರದ ಸಾಮಂತರಾಗಿ ಒಡೆಯರು ಶತಮಾನಗಳ ಕಾಲ ಬಾಳಿದರು. ಕ್ರಿ. ಶ. ೧೩೯೦ರಿಂದ ೧೬೧೦ರತನಕ ಇದು ಚಿಕ್ಕ ರಾಜ್ಯವಾಗಿತ್ತು. ೧೬೧೦ ರಲ್ಲಿ ರಾಜ ಒಡೆಯರು ವಿಜಯನಗರದ ಪ್ರತಿನಿಧಿಯಿಂದ ಶ್ರೀರಂಗಪಟ್ಟಣ ವನ್ನು ಕಿತ್ತುಕೊಂಡರು. ವಿಜಯನಗರದ ರತ್ನಸಿಂಹಾಸನವೂ ಇವರ ವಶ ವಾಯಿತು. ಸುತ್ತಲೂ ಇದ್ದ ಚಿಕ್ಕಪುಟ್ಟ ಪಾಳೆಯಗಾರರನ್ನು ಇವರು ಸದೆ ಬಡಿದರು.


ರಣಧೀರ ಕಂಠೀರವ ನರಸರಾಜ ಒಡೆಯರು (೧೬೩೮–೧೬೫೯)

ಇವರು ಮಹಾಪರಾಕ್ರಮಿಗಳು. ತಿರುಚನಾಪಳ್ಳಿಯ ಜಟ್ಟಿ ಯನ್ನು ಜಯಿಸಿ ಜಗಜಟ್ಟಿಯೆನಿಸಿದರು. ಬಹಮನಿ ಸುಲ್ತಾನನು ಇವರ ಮೇಲೆ ಬೀಳಲು ರಣದುಲ್ಲಾಖಾನನನ್ನು ಅಪಾರ ಸೇನೆಯೊಡನೆ ಕಳಿಸಿದನು.

ಇವರು ಆ ಮಹಮದೀಯ ಸೇನಾನಿಯನ್ನು ಸೋಲಿಸಿ ಕೀರ್ತಿಶಾಲಿಗಳಾದರು. ವಿಜಯನಗರದ ದೊರೆಯಾದ ಶ್ರೀರಂಗನಿಗೆ ಆಶ್ರಯ ನೀಡಿ ರಕ್ಷಿಸಿದರು.

ಚಿಕ್ಕದೇವರಾಜ ಒಡೆಯರು (೧೬೭೨–೧೭೦೪)

ಮೈಸೂರು ಅರಸುಮನೆತನದ ಹಿರಿಮೆಯನ್ನು ಹೆಚ್ಚಿಸಿದವರಲ್ಲಿ ಚಿಕ್ಕದೇವರಾಜ ಒಡೆಯರು ಅಗ್ರಗಣ್ಯರು. ರಣದುಲ್ಲಾಖಾನನನ್ನು ಜಯಿಸಿದರು. ತಮಿಳುನಾಡನ್ನು ಆಕ್ರಮಿಸಿದರು. ಮರಾಠ ವೆಂಕೋಜಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಇವರು ಬೆಂಗಳೂರನ್ನು ಕೊಂಡುಕೊಂಡರು. ಔರಂಗಜೇಬನ ಅನುಗ್ರಹಕ್ಕೆ ಇವರು ಪಾತ್ರರಾಗಿ ಸನ್ಮಾನಿತರಾದರು. ಇವರ ಕೀರ್ತಿ ದೆಹಲಿಯತನಕ ಹರಡಿದಂತಾಯಿತು. ಸಾಹಿತ್ಯ ಪ್ರೇಮಿಗಳಾದ ಇವರ ಕಾಲದಲ್ಲಿ ಕನ್ನಡ ಸಾಹಿತ್ಯ ಹೇರಳವಾಗಿ ಬೆಳೆಯಿತು. ೩೧ ವರ್ಷ ಆಳಿದ ಇವರು ಅಪಾರ ಧನವನ್ನು ಸಂಗ್ರಹಿಸಿ ನವಕೋಟಿನಾರಾಯಣರೆನಿಸಿದ್ದರು. ಇವರ ಉತ್ತರಾಧಿಕಾರಿಗಳು ಸಮರ್ಥರಾಗಿರಲಿಲ್ಲ. ದಳವಾಯಿಗಳ ಪ್ರಾಬಲ್ಯ ಹೆಚ್ಚಿತು. ಆಗಿನ ಮರಾಠರೂ ಬಿಜಾಪುರದ ಸುಲ್ತಾನರೂ ಮೈಸೂರು ದೊರೆಯನ್ನು ಬೆದರಿಸಿ ಹಣದೋಚಿದರು. ಚಿಕ್ಕದೇವರಾಜರು ಕೂಡಿಟ್ಟ ಸಂಪತ್ತು ಈ ರೀತಿ ನಾಶವಾಯಿತು. ದಳವಾಯಿಗಳ ಕಾಟದಿಂದ ಪಾರಾಗಲು ಮೈಸೂರು ದೊರೆಗಳು ಹೈದರಾಲಿಯನ್ನು ಮುಂದಕ್ಕೆ ತಂದರು. ಕಾಲಕ್ರಮೇಣ ಹೈದರಾಲಿ ಪ್ರಬಲನಾಗಿ ರಾಜ್ಯಸೂತ್ರವನ್ನು ತಾನೇ ವಹಿಸಿಕೊಂಡನು (೧೭೬೬). ನಿರ್ವೀರ್ಯವಾದ ಮೈಸೂರು ರಾಜ್ಯವು ಸಮರ್ಥ ಆಡಳಿತಗಾರನಿಗಾಗಿ ಕಾದಿತ್ತು. ಹೈದರಾಲಿಯು ದಳವಾಯಿಗಳಾದ ನಂಜರಾಜಯ್ಯ ದೇವರಾಜಯ್ಯ ಇವರ ಗರಡಿಯಲ್ಲಿ ಪಳಗಿ ಕೊನೆಗೆ ಅವರನ್ನು ಮೂಲೆಗೆ ತಳ್ಳಿ ತಾನೇ ಸರ್ವಾಧಿಕಾರಿಯಾದನು. ಫ್ರೆಂಚ್ ಸೇನಾಧಿಪತಿಗಳನ್ನು ಕರೆಸಿ ಮೈಸೂರು ಸೈನ್ಯಕ್ಕೆ ಶಿಕ್ಷಣ ಕೊಡಿಸಿದನು. ಇಂಗ್ಲಿಷರನ್ನು ಎರಡುಬಾರಿ ಸೋಲಿಸಿದನು. ಮೈಸೂರಿನ ಎಲ್ಲೆಯನ್ನು ಎಲ್ಲ ದಿಕ್ಕಿನಲ್ಲೂ ವಿಸ್ತರಿಸಿದನು. ಕಂಗೆಟ್ಟಿದ್ದ ಮೈಸೂರು ರಾಜ್ಯಕ್ಕೆ ಆಶಾದೀಪವಾಗಿ ಕಂಗೊಳಿಸಿದನು. ೧೭೮೨ರಲ್ಲಿ ಇವನು ರಣರಂಗದಲ್ಲಿ ಮೃತನಾದನು. ಇವನ ಮಗನಾದ ಟಿಪ್ಪುಸುಲ್ತಾನನು ಮಹಾಶೂರನಾಗಿದ್ದನು. ಇಂಗ್ಲಿಷರನ್ನು ಮೊದಲು ಸೋಲಿಸಿದನು.



ವಿಜಯನಗರದ ಶೈಲಿಯನ್ನೇ ಅನುಸರಿಸಿ ಮೈಸೂರಿನ ಒಡೆಯರು ದೇವಾಲಯಗಳನ್ನು ಕಟ್ಟಿಸಿದರು.
ಮೇಲಿನ ಚಿತ್ರ ಬೆಂಗಳೂರಿನ ಕೋಟೆ ವೆಂಕಟರಮಣ ಮಂದಿರದ್ದು.

ಅವರ ಪಾಲಿಗೆ ಸಿಂಹಸ್ವಪ್ನವಾದನು. ಶೂರನಾದರೂ ಇವನು ತಂದೆಯಂತೆ ಯುಕ್ತಿವಂತನಾಗಿರಲಿಲ್ಲ. ಮೈಸೂರು ಅರಸುಮನೆತನವನ್ನು ಮೂಲೆಗೆ ತಳ್ಳಿ ತಾನೇ ಸುಲ್ತಾನನಾದುದರಿಂದ ಇವನಿಗೆ ರಾಜ್ಯದೊಳಗಿನ ಶತ್ರುಗಳು ಹೆಚ್ಚಿದರು. ಮರಾಠರೂ, ನಿಜಾಮರೂ, ಇಂಗ್ಲಿಷರೂ ಮೂವರೂ ಒಂದಾಗಿ ಇವನ ಪ್ರಾಬಲ್ಯವನ್ನು ಕುಂಟಿತಗೊಳಿಸಿದರು. ೧೭೯೯ರಲ್ಲಿ ಟಿಪ್ಪುವನ್ನು ಇಂಗ್ಲಿಷರು ಕೊಂದುಹಾಕಿದರು.

ಟಿಪ್ಪು ಸತ್ತನಂತರ ಮೈಸೂರು ರಾಜ್ಯದಲ್ಲಿ ತಮಗೆ ಬೇಕಾದಷ್ಟನ್ನು ಇಂಗ್ಲಿಷರೂ, ನಿಜಾಮರೂ, ಮರಾಠರೂ ಹಂಚಿಕೊಂಡು ಉಳಿದ ಭಾಗವನ್ನು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಕೊಟ್ಟರು. ಒಡೆಯರು ಸಾಹಿತ್ಯ, ಕಲೆಗಳ ಏಳಿಗೆಗಾಗಿ ಅಪಾರ ಹಣವನ್ನು ವಿನಿಯೋಗಿಸಿದರು. ದೈವಭಕ್ತರಾದ ಇವರು ಮಾಡಿದ ಸತ್ಪಾತ್ರದಾನಕ್ಕೆ ಲೆಕ್ಕವೇ ಇಲ್ಲ. ಇವರ ಕಾಲದಲ್ಲಿ ಕ್ಷಾಮಡಾಮರಗಳಿಂದ ರಾಜ್ಯ ತತ್ತರಿಸಿತು. ರಾಜರು ಔದಾರ್ಯದಿಂದ ಅಲ್ಲಲ್ಲಿ ಅನ್ನ ಸತ್ರಗಳನ್ನು ತೆಗೆದು ಜನತೆಯನ್ನು ಬದುಕಿಸಿದರು. ಇನ್ನೊಂದುಕಡೆ ಪಾಳೆಯಗಾರರು ದಂಗೆಯೆದ್ದರು. ೧೮೩೩ರಲ್ಲಿ ಇಂಗ್ಲಿಷರು ರಾಜ್ಯವನ್ನು ತಾವೇ ವಹಿಸಿಕೊಂಡರು. ಐವತ್ತು ವರ್ಷ ಕಮಿಷನರುಗಳು ಮೈಸೂರನ್ನು ಆಳಿದರು. ೧೮೮೧ರಲ್ಲಿ ಇಂಗ್ಲಿಷರು ಮೈಸೂರು ಅರಸುಮನೆತನದ ಚಾಮರಾಜ ಒಡೆಯರಿಗೆ ರಾಜ್ಯವನ್ನು ವಹಿಸಿಕೊಟ್ಟರು. ಇವರ ಮಕ್ಕಳಾದ ನಾಲ್ವಡಿಕೃಷ್ಣರಾಜರು ರಾಜರ್ಷಿಗಳೆನಿಸಿದ್ದರು. ಇವರ ಕಾಲದಲ್ಲಿ ಮೈಸೂರು ರಾಮರಾಜ್ಯವೆನಿಸಿತು. ಇವರ ನಂತರ ಜಯಚಾಮರಾಜ ಒಡೆಯರು ಹದಿನಾರು ವರ್ಷ ರಾಜ್ಯವಾಳಿ ೧೯೫೬ರಲ್ಲಿ ಪ್ರಜೆಗಳಿಗೆ ರಾಜ್ಯವನ್ನು ವಹಿಸಿಕೊಟ್ಟರು. ಇಲ್ಲಿಗೆ ಮೈಸೂರು ಒಡೆಯರ ಆಡಳಿತ ಮುಗಿಯಿತು.

ಬಹಮನಿರಾಜ್ಯ

ದೆಹಲಿಯ ಸುಲ್ತಾನ ಮಹಮುದ್‌ತಗಲಖನ ನಂತರ ಕ್ರಾಂತಿಯಾಗಿ ದಕ್ಷಿಣದಲ್ಲಿ ಹಸನ್‌ಗಂಗು ಎಂಬುವನು ಬಹಮನಿರಾಜ್ಯವನ್ನು ಸ್ಥಾಪಿಸಿದನು (೧೩೪೭). ಮೊದಲು ಕಲುಬುರ್ಗಿಯು ರಾಜಧಾನಿಯಾಗಿದ್ದಿತು. ಅನಂತರ ಬಿದರೆಯು ರಾಜಧಾನಿಯಾಯಿತು. ಇನ್ನೂರು ವರ್ಷ ಬಹಮನಿರಾಜ್ಯವು ದಕ್ಷಿಣಾಪಥದ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿತು. ವಿಜಯನಗರಕ್ಕೂ ಬಹಮನಿರಾಜ್ಯಕ್ಕೂ ಹತ್ತಿದ ಜಗಳ ಹರಿಯದೆ ಕೊನೆಯತನಕ

ನಡೆದೇ ಇತ್ತು. ವಿಜಯನಗರದ ಪತನಕ್ಕೆ ಬಹಮನಿಸುಲ್ತಾನರ ಪ್ರತೀಕಾರವೇ ಕಾರಣವಾಯಿತು. ಈ ವಂಶದಲ್ಲಿ ಹದಿನೆಂಟುಮಂದಿ ಸುಲ್ತಾನರಾದರು. ಇವರಲ್ಲಿ ಅನೇಕರು ವಿಷಯಲಂಪಟರಾಗಿದ್ದರು. ಯಾದವೀ ಕಲಹದಿಂದ ಈ ರಾಜ್ಯ ಕಂಗೆಟ್ಟಿತು. ಪ್ರಜೆಗಳು ಪಡಬಾರದ ಪಾಡನ್ನು ಪಟ್ಟರು. ೧೫೩೮ರಲ್ಲಿ ಈ ರಾಜ್ಯವು ಐದು ಭಾಗಗಳಾಗಿ ಒಡೆಯಿತು.

ಬಹಮನಿರಾಜ್ಯದಲ್ಲಿನ ಇಸ್ಲಾಂ ಸಂಸ್ಕೃತಿಯ ಹೆಗ್ಗುರುತಾಗಿ ಹಲವಾರು ಮಸೀದಿಗಳು ಈಗಲೂ ಇವೆ. 'ಗೋಳಗುಂಬಜ್' ಬಿಜಾಪುರದ ಏಕೆ, ಕರ್ನಾಟಕದ ವಾಸ್ತುಶಿಲ್ಪಕ್ಕೇ ಅಪರೂಪವಾದ ಕಾಣಿಕೆಯಾಗಿದೆ.

ಕರ್ನಾಟಕದ ಪಾಳೆಯಗಾರರು

ಕರ್ನಾಟಕದ ರಾಜಕೀಯದಲ್ಲಿ ಪಾಳೆಯಗಾರರ ಪಾತ್ರವನ್ನು ನಾವು ಮರೆಯುವಂತಿಲ್ಲ. ಭದ್ರವಾದ ಪ್ರಬಲವಾದ ರಾಜ್ಯವಿದ್ದಾಗ ಪಾಳೆಯಗಾರರು ಸಾಮಂತರಾಗಿ ಬಾಳಿದರೆ, ರಾಜ್ಯ ದುರ್ಬಲವಾದಾಗ ಸ್ವತಂತ್ರರಾಗುತ್ತಿದ್ದರು. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ವಿಜಯನಗರದವರು, ಮೈಸೂರು ಅರಸರು ಇವರೆಲ್ಲ ಮೊದಲು ಪುಟ್ಟ ಪುಟ್ಟ ಪಾಳೆಯಗಾರರಾಗಿದ್ದವರೇ. ಸದವಕಾಶ ಸಿಕ್ಕಿದಾಗ ಮೇಲಕ್ಕೆದ್ದು ಸಾಮ್ರಾಜ್ಯವನ್ನು ನಿರ್ಮಿಸಿದರು.

ಚಿತ್ರದುರ್ಗ, ನಿಡುಗಲ್ಲು, ಮಧುಗಿರಿ, ತರೀಕೆರೆ, ಹರಪನಹಳ್ಳಿ, ಉಮ್ಮತ್ತೂರು, ಬಸವಾಪಟ್ಟಣ, ಗೇರಸೊಪ್ಪೆ, ಮಾಗಡಿ, ಸುರಪುರ ಈ ಸ್ಥಳಗಳಲ್ಲಿ ಆಳಿದ ಪಾಳೆಯಗಾರರು ತಂತಮ್ಮ ರಾಜ್ಯಗಳಲ್ಲಿ ಜನಪ್ರಿಯವಾದ ಕಾರ್ಯಗಳನ್ನು ಮಾಡಿ ಇಂದಿಗೂ ಜನತೆಯ ಬಾಯಲ್ಲಿ ಅಮರರಾಗಿರುವರು. 'ಪಾಳೆಯಗಾರ' ಎಂಬುದು ಸಾಹಸದ ಹೆಗ್ಗುರುತೂ ಆಗಿದೆ.

ಅಮಾತ್ಯರು, ದಂಡಾಧಿಪತಿಗಳು

ಒಂದು ರಾಜ್ಯದ ಏಳುಬೀಳುಗಳಿಗೆ ಅಲ್ಲಿಯ ಅಮಾತ್ಯರೂ ದಂಡಾಧಿಪತಿಗಳೂ ರಾಜನಷ್ಟೇ ಕಾರಣರಾಗುವರು. ರಾಜನನ್ನೂ ಜನ ಮರೆಯುವಷ್ಟು ಅಥವಾ ರಾಜನಷ್ಟೇ ಪದವಿಪ್ರತಿಷ್ಠೆಯನ್ನು ಬೆಳಸಿಕೊಂಡ ಅಮಾತ್ಯರೂ ದಂಡಾಧಿಪತಿಗಳೂ ಕರ್ನಾಟಕದ ಇತಿಹಾಸದಲ್ಲಿ ಅನೇಕ ಮಂದಿ ಇರುವರು.

ರಾಷ್ಟ್ರಕೂಟರ ನೃಪತುಂಗನ ಮಂತ್ರಿ ಬಂಕೇಯ ಅಂದಿನ ರಾಜಕೀಯ



ವಿಪ್ಲವಗಳನ್ನು ನಿಗ್ರಹಿಸಿ ನೃಪತುಂಗನಿಗೂ ಅವನ ಮಗ ಇಮ್ಮಡಿ ಕೃಷ್ಣನಿಗೂ ಬಂದ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಸಾಮ್ರಾಜ್ಯದ ಬುನಾದಿಯನ್ನು ಭದ್ರಪಡಿಸಿದನು (ಕ್ರಿ ಶ. ೮೧೪-೮೮೦). ಗಂಗರ ಮಹಾಮಂತ್ರಿ ಹಾಗೂ ಸರ್ವ ಸೇನಾಧಿಪತಿ ಚಾಮುಂಡರಾಯನು ತಾನು ಬದುಕಿರುವತನಕ ಗಂಗಸಾಮ್ರಾಜ್ಯ ಅನ್ಯಾಕ್ರಾಂತವಾಗದಂತೆ ತಡೆಹಿಡಿದು ಸಾಮ್ರಾಜ್ಯಕ್ಕೆ ಜೀವದಾನ ಮಾಡಿದನು. ೯೮೨ರಲ್ಲಿ ಶ್ರವಣಬೆಳಗುಳದ ಗೋಮಟೇಶನನ್ನು ಸ್ಥಾಪಿಸಿ ಅಮರನಾದನು. ಶೂರ ಸೇನಾನಿ, ದಕ್ಷಮಂತ್ರಿ, ಜೊತೆಗೆ ಕನ್ನಡ ಸಾಹಿತ್ಯ ಪ್ರೇಮಿಯೂ ಆಗಿದ್ದನು. ಕಲಚುರ್ಯರ ಸಂಕಮನ (೧೧೭೭-೧೧೮೩) ಸೇನಾಧಿಪತಿ ಕಾವಣಯ್ಯನು ಕಳಚುರ್ಯ ರಾಜ್ಯ ಸಮುದ್ಧರಣನಾಗಿ ಕೀರ್ತಿವಂತನಾದನು. ವಿಷ್ಣುವರ್ಧನನ 'ಪೂರ್ಣಕುಂಭ'ವೆನಿಸಿದ ಗಂಗರಾಜನು ಹೊಯ್ಸಳ ಸಾಮ್ರಾಜ್ಯದ ಕೀರ್ತಿಗೆ ಕಳಸವಿಟ್ಟನು (೧೧೨೦). ಶಿಲ್ಪಕಲೆಗೆ ಪ್ರೋತ್ಸಾಹಕೊಟ್ಟನು. ಚಾಮುಂಡರಾಯನಷ್ಟೇ ಜೈನಧರ್ಮದ ಪ್ರಭಾವನೆಯೆಸಗಿದನು. ಹೊಯ್ಸಳ ಮೂರನೆಯ ನಾರಸಿಂಹನ (೧೨೫೪-೧೨೯೧) ಸೇನಾಧಿಪತಿ ಸೋಮದಳಪತಿಯು ಶಿಲ್ಪಕಲೆಗೆ ತಿಲಕಪ್ರಾಯವಾದ ಸೋಮನಾಥಪುರದ ದೇವಾಲಯವನ್ನು ಕಟ್ಟಿಸಿ ಕಲೆಗೆ ಜೀವತುಂಬಿದನು. ವಿಜಯನಗರದ ಕೃಷ್ಣದೇವರಾಯನ (೧೫೦೯-೧೫೨೯) ಮಂತ್ರಿಯಾದ ತಿಮ್ಮರಸನು ಚಾಣಾಕ್ಷನಾಗಿದ್ದನು. ಇವನ ಮಾರ್ಗದರ್ಶನದಲ್ಲಿ ಸಾಮ್ರಾಜ್ಯದ ಹಿರಿಮೆ ಮುಗಿಲು ಮುಟ್ಟಿತು. ಚಿಕ್ಕದೇವರಾಜ ಒಡೆಯರ ಮಂತ್ರಿಯಾದ ವಿಶಾಲಾಕ್ಷಪಂಡಿತನು ಅಂದಿನ ರಾಜಕೀಯದಲ್ಲಿ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು. ಪೂರ್ಣಯ್ಯನವರು ಹೈದರಾಲಿಗೆ, ಟಿಪ್ಪುಸುಲ್ತಾನನಿಗೆ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಮಂತ್ರಿಯಾಗಿ ಕರ್ನಾಟಕದ ಹಿರಿಮೆಯನ್ನು ಬೆಳೆಸಿದರು. ಟಿಪ್ಪುವಿನ ನಂತರ ಹನ್ನೆರಡುವರ್ಷ ಇವರು ಮೈಸೂರಿನ ರಾಜ್ಯಭಾರವನ್ನು ನಡೆಸಿ (೧೮೦೦-೧೮೧೨) ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಕರಾಗುತ್ತಿದ್ದಂತೆ ರಾಜ್ಯವನ್ನು ವಹಿಸಿಕೊಟ್ಟರು. ಮೈಸೂರಿಗೆ ಕ್ಷಾಮಬಂದಾಗ ಇರುವ ಅನ್ನಸತ್ರಗಳನ್ನು ಸ್ಥಾಪಿಸಿ ಜನತೆಯನ್ನು ಉಳಿಸಿದರು. ಈಗಲೂ 'ಪೂರ್ಣಯ್ಯನ ಸತ್ರ' ಎಂಬ ಮಾತು ಜನತೆಯ ಬಾಯಲ್ಲಿ ಉಳಿದುಬಂದಿದೆ. ಚಾಮರಾಜೇಂದ್ರ ಒಡೆಯರ ಮಂತ್ರಿಗಳಾದ ರಂಗಾಚಾರ್ಲು (೧೮೮೧-೮೩)ರವರು

ಮೈಸೂರಿನಲ್ಲಿ ಪ್ರಜಾಪ್ರತಿನಿಧಿಸಭೆಯನ್ನು ಸ್ಥಾಪಿಸಿ ಪ್ರಜಾಪ್ರಭುತ್ವಕ್ಕೆ ತಳಪಾಯಹಾಕಿದರು. ನಾಲ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರಾಗಿದ್ದ ಎಂ. ವಿಶ್ವೇಶ್ವರಯ್ಯನವರು ನಿಸ್ವಾರ್ಥಿಗಳು; ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದರು. ನೀರಾವರಿ ಸೌಕರ್ಯವನ್ನು ಹೆಚ್ಚಿಸಿ ರೈತರಿಗೆ ಉಪಕಾರಮಾಡಿದರು. ಅನಂತರ ದಿವಾನರಾದವರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್‌ರವರು ಅಂದಿಗೆ ಭರತಖಂಡದಲ್ಲೇ ನುರಿತ ಆಡಳಿತಗಾರರೆಂದು ಹೆಸರುಪಡೆದರು.

ರಾಜರಕಾಲದ ಆಡಳಿತಕ್ರಮ

ಕದಂಬರು, ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಇವರ ಕಾಲದಲ್ಲಿ ಸಾಮಂತರಾಜರೂ, ಪಾಳೆಯಗಾರರೂ ಕೇಂದ್ರಪ್ರಭುತ್ವದ ಕೃಪಾಶ್ರಯದಲ್ಲಿದ್ದರು. ಒಳಾಡಳಿತದಲ್ಲಿ ಸ್ವತಂತ್ರರಾಗಿದ್ದರು. ಹಳ್ಳಿಗಳು ಸ್ವಯಂಪೂರ್ಣವಾಗಿ ಹಳ್ಳಿಯ ಆಡಳಿತ ಗ್ರಾಮಸಭೆಗಳ ಕೈಯಲ್ಲಿಯೇ ಇತ್ತು. ರಕ್ಷಣೆಯನ್ನು ರಾಜರು ನೋಡಿಕೊಳ್ಳುತ್ತಿದ್ದರು. ರಾಜರಿಗೆ ನಾನಾರೂಪದ ಕರವನ್ನು ಪ್ರಜೆಗಳು ಸಂದರ್ಭೋಚಿತವಾಗಿ ಸಲ್ಲಿಸುತ್ತಿದ್ದರು. ಮಠಗಳು ವಿದ್ಯಾಕೇಂದ್ರಗಳಾಗಿದ್ದವು. ರಾಜರು ಇವಕ್ಕೆ ಮಾನ್ಯಗಳನ್ನು ಬಿಟ್ಟಿದ್ದರು.

ಕೇಂದ್ರಪ್ರಭುತ್ವ ದುರ್ಬಲವಾದಾಗ, ಯಾದವೀಕಲಹ ಪ್ರಾರಂಭವಾದಾಗ, ಹಾಗೂ ಶತ್ರುಗಳು ಮುತ್ತಿದಾಗ ಪ್ರಜೆಗಳು ಕಷ್ಟಕ್ಕೀಡಾಗುತ್ತಿದ್ದರು. ಪುಲಿಕೇಶಿಯ ಕಾಲದಲ್ಲಿ ಪಲ್ಲವರು ವಾತಾಪಿಯನ್ನು ಮುತ್ತಿಕೊಳ್ಳೆಹೊಡೆದರು. ಊರನ್ನು ನಾಶಮಾಡಿದರು (೬೪೩-೪೪). ರಾಷ್ಟ್ರಕೂಟರ ಖೊಟ್ಟಿಗನ ಆಡಳಿತದಲ್ಲಿ ಪರಮಾರಸೀಯಕನು ದಂಡೆತ್ತಿ ಬಂದು (೯೭೨) ಮಾನ್ಯಕೇಟವನ್ನು ನಾಶಮಾಡಿದನು. ಕಲ್ಯಾಣಿ ಚಾಲುಕ್ಯಸತ್ಯಾಶ್ರಯನ ಕಾಲದಲ್ಲಿ (೯೯೭-೧೦೦೮) ರಾಜೇಂದ್ರ ಚೋಳನು ಕರ್ನಾಟಕಕ್ಕೆ ನುಗ್ಗಿ ಸುತ್ತಮುತ್ತಣ ನಾಡುಗಳನ್ನು ಸೂರೆಮಾಡಿ ಬ್ರಾಹ್ಮಣಸ್ತ್ರೀಯರನ್ನು ಹಿಡಿದು ಕಂಡಕಂಡವರಿಗೆ ಬಲವಂತವಾಗಿ ಮದುವೆಮಾಡಿದನು. ದ್ವಾರಸಮುದ್ರವನ್ನು ಅನೇಕಬಾರಿ ಮುಸಲ್ಮಾನ ಸೇನಾಧಿಪತಿಗಳು ಲೂಟಿಮಾಡಿದ್ದಲ್ಲದೆ ಊರಿನ ಸೌಂದರ್ಯವನ್ನು ವಿರೂಪಗೊಳಿಸಿದರು. ವಿಜಯನಗರದ ರಾಮರಾಯನು ಕೊಲೆಯಾಗುತ್ತಿದ್ದಂತೆ ಬಹುಮನಿಸುಲ್ತಾ

ನರ ಸೇವೆ ರಾಜಧಾನಿಯನ್ನು ಕೊಳ್ಳೆಹೊಡೆದು, ದೇಗುಲಗಳನ್ನು ಹಾಳು ಗೆಡವಿತು. ಇಂಥ ಘಟನೆಗಳನ್ನು ಚರಿತ್ರೆಯ ಉದ್ದಕ್ಕೂ ಕಾಣಬಹುದು.

ಸ್ವಾತಂತ್ರ್ಯ ನಂತರ

೧೯೪೭ರಲ್ಲಿ ಭರತಖಂಡವು ಸ್ವತಂತ್ರವಾಯಿತು. ೧೯೫೬ರಲ್ಲಿ ಕರ್ನಾಟಕದ ಏಕೀಕರಣವಾಯಿತು. ಹರಿದುಹಂಚಿಹೋಗಿದ್ದ ಕರ್ನಾಟಕವು ಒಂದು ಆಡಳಿತಕ್ಕೆ ಒಳಪಟ್ಟಿತು. ರಾಜಪ್ರಭುತ್ವವು ಹೋಗಿ ಪ್ರಜಾಪ್ರಭುತ್ವವು ಬಂದಿತು. ಪ್ರಜೆಗಳಿಂದ ಚುನಾಯಿತರಾದ ಪ್ರಜಾಪ್ರತಿನಿಧಿಗಳ ಸಭೆ ಹಾಗೂ ಪ್ರಜೆಗಳೇ ಆರಿಸಿದ ಮುಖಂಡರ ಮಂತ್ರಿಮಂಡಲ ಬಂದಿತು. ರಾಷ್ಟ್ರದ ವಯಸ್ಕರಿಗೆಲ್ಲ ಮತದಾನದ ಹಕ್ಕು ದೊರೆಯಿತು. ಬಡವಬಲ್ಲಿದ ಎಂಬ ಭೇದವಿಲ್ಲದೆ ಎಲ್ಲರೂ ರಾಜಕೀಯವಾಗಿ ಸಮಾನರಾದಂತಾಯಿತು. ವಂಶಪಾರಂಪರ್ಯವಾದ ಅಧಿಕಾರಕ್ಕೆ ಚ್ಯುತಿಬಂದಿತು. ಆಗಾಗ ಪ್ರಜೆಗಳೇ ತಮಗೆ ಬೇಕಾದ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಸೌಕರ್ಯ ದೊರೆಯಿತು.

ಸಮತಾವಾದವು ಇಂದಿನ ಧೋರಣೆಯಾಗಿದೆ. ರಾಷ್ಟ್ರದ ಉತ್ಪತ್ತಿಯು ಸರ್ವರಿಗೂ ಹಂಚಿಕೆಯಾಗಬೇಕು. ಬಡವ ಮತ್ತು ಬಲ್ಲಿದರ ನಡುವಣ ಅಂತರ ಹೋಗಬೇಕು ಎಂಬ ತತ್ವವನ್ನು ಸ್ವಲ್ಪಸ್ವಲ್ಪವಾಗಿ ಈಗಿನ ಸರ್ಕಾರ ಅನುಷ್ಠಾನಕ್ಕೆ ತರುತ್ತಿದೆ. ಭೂಸುಧಾರಣೆಯನ್ನು ತಂದು ಉಳುವವನೇ ಭೂಮಿಗೆ ಒಡೆಯನಾಗುವಂತೆ ಈಗಿನ ಆಡಳಿತ ಮಾಡಿದೆ. ಜೀತಪದ್ಧತಿಯಿಂದಲೂ ಋಣಭಾರದಿಂದಲೂ ದೀನದಲಿತರನ್ನು ಉದ್ಧರಿಸುವ ಯೋಜನೆಯನ್ನು ಸರ್ಕಾರ ರೂಪಿಸಿದೆ.

ಈಗಿರುವುದು ಪ್ರಜಾಸರ್ಕಾರ. ಇದರ ಒಳಿತು ಮತ್ತು ಕೆಡಕು ಎರಡಕ್ಕೂ ಪ್ರಜೆಗಳೇ ಬಾಧ್ಯರಾಗಿರುವರು. ಪ್ರಜೆಗಳು ಬಿತ್ತಿದ್ದನ್ನು ಬೆಳೆಯುವರು. ಬೆಳೆದುದನ್ನು ಭೋಗಿಸುವರು–ಇದೇ ಪ್ರಜಾಸರ್ಕಾರದ ರಹಸ್ಯ.

ಕರ್ನಾಟಕದ ಧರ್ಮಗಳು

ಕರ್ನಾಟಕವು ಕ್ರಿಸ್ತಪೂರ್ವದಿಂದಲೂ ಧರ್ಮಗಳ ತೌರುಮನೆಯಾಗಿದೆ. ಬೆಳಕುಬರುವ ದಿಕ್ಕಿಗೆಲ್ಲ ಕಿಟಕಿಗಳನ್ನು ತೆಗೆದು ಸ್ವಾಗತಿಸುವುದೇ ಇಲ್ಲಿಯ ಪರಂಪರೆಯಾಗಿದೆ. ದ್ರಾವಿಡ ಸಂಸ್ಕೃತಿಯ ಕರ್ನಾಟಕವು ಆರ್ಯಧರ್ಮ

ವನ್ನು ಸ್ವಾಗತಿಸಿತು. ವೇದ, ಉಪನಿಷತ್ತು, ಭಗವದ್ಗೀತೆಗಳನ್ನು ತನ್ನ ದಿನಚರಿಯಲ್ಲಿ ಮಾರ್ಗದರ್ಶಕ ಧರ್ಮಗ್ರಂಥಗಳೆಂದು ಈ ನಾಡು ಸ್ವೀಕರಿಸಿತು. ಷಡ್‌ದರ್ಶನಗಳನ್ನೂ ಕನ್ನಡಿಗರು ಗೌರವಿಸಿದರು. ಹಿಂದೂ ಧರ್ಮವು ಏಕಸೂತ್ರದಲ್ಲಿ ಪೋಣಿಸಿದ ನಾನಾ ಬಣ್ಣಗಳ ಹೂಮಾಲೆಯಾಗಿದೆ. ಬ್ರಹ್ಮಸಾಕ್ಷಾತ್ಕಾರಕ್ಕೆ ಹಲವು ಮಾರ್ಗಗಳಿವೆ ಎಂಬುದು ಹಿಂದೂಧರ್ಮದ ಉಸಿರಾಗಿದೆ. ಜ್ಞಾನ, ಭಕ್ತಿ, ಕರ್ಮ ಈ ಮೂರರಿಂದಲೂ ಪರಮಾತ್ಮ ನನ್ನು ಕಾಣಬಹುದೆಂದು ಹಿಂದೂಧರ್ಮವು ಸಾರಿದೆ. 'ನೀನು ಯಾವರೂಪ ದಲ್ಲಿ ಪೂಜಿಸುವೆಯೋ ಆ ರೂಪದಲ್ಲಿ ನಾನು ಕಾಣಿಸಿಕೊಳ್ಳುವೆನು. ನನ್ನ ಮೇಲೆ ಪೂರ್ಣ ವಿಶ್ವಾಸವಿಡು. ನಿನ್ನ ಆಗುಹೋಗುಗಳನ್ನು ನಾನೆ ನೋಡಿ ಕೊಳ್ಳುವೆನು. ಸದಾ ಸ್ವಧರ್ಮನಿರತನಾಗು; ಕರ್ಮನಿರತನಾಗು. ಫಲಾ ಫಲಗಳನ್ನು 'ನನಗೆಬಿಡು' ಎಂದು ಭಗವದ್ಗೀತೆಯು ಘೋಷಿಸಿದೆ.

ಜೈನಧರ್ಮವು ಕ್ರಿ. ಪೂ. ನಾಲ್ಕನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಬಂದುದನ್ನು ವಿದ್ವಾಂಸರು ಒಪ್ಪುವರು. ಭದ್ರಬಾಹುಮುನಿಗಳು ನಂದ ಚಂದ್ರಗುಪ್ತನೊಡನೆ ಸಹಸ್ರಾರುಮಂದಿ ಶಿಷ್ಯರನ್ನು ದಕ್ಷಿಣ ಭಾರತಕ್ಕೆ ಕರೆದುತಂದರು. ಇವರಿಂದ ಜೈನಧರ್ಮವು ಕರ್ನಾಟಕಕ್ಕೂ ಬಂದಂತಾ ಯಿತು. ಇವರು ಶ್ರವಣಬೆಳಗುಳದಲ್ಲಿ ತಂಗಿ ತಪವೆಸಗಿ ಕೊನೆಗೆ ಅಲ್ಲಿಯೇ ಸ್ವರ್ಗಸ್ಥರಾದರು. ಗಂಗರು, ರಾಷ್ಟ್ರಕೂಟರು ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹಕೊಟ್ಟರು.

ಅಹಿಂಸೆಯು ಜೈನಧರ್ಮದ ಉಸಿರು. 'ಸಕಲಪ್ರಾಣಿಗಳೂ ಸುಖ ವಾಗಿರಬೇಕು. ನೀನು ಬದುಕು, ಅನ್ಯರನ್ನೂ ಬದುಕಲು ಬಿಡು' ಎಂದು ಜೈನಧರ್ಮ ಪ್ರಾಣಿದಯೆಯನ್ನು ಬಿತ್ತಿತು. 'ಅವಶ್ಯಕತೆಗಿಂತಲೂ ಹೆಚ್ಚಾಗಿ ಯಾವುದನ್ನೂ ಸಂಗ್ರಹಿಸಬೇಡ. ಸಂಗ್ರಹಿಸಿದಷ್ಟೂ ನೀನು ದುಃಖಿಯಾಗುವೆ' ಎಂದು ಸಾತ್ವಿಕ ಸಮತಾವಾದಕ್ಕೆ ಜೈನಧರ್ಮ ತಳಹದಿ ಯಾಗಿದೆ. 'ಎದುರಾಳಿಯ ಅಭಿಪ್ರಾಯದಲ್ಲೂ ಸತ್ಯವಿರಬಹುದು. ತಾಳ್ಮೆ ಯಿಂದ ವರ್ತಿಸಿ ಅನ್ಯರ ಅಭಿಪ್ರಾಯದ ದೃಷ್ಟಿಕೋಣವನ್ನು ಗ್ರಹಿಸಿ ಹೊಂದಿಕೊಳ್ಳುವುದನ್ನು ಕಲಿಯಿರಿ' ಎಂದು ಜೈನಧರ್ಮವು ಸಮನ್ವಯ ಸೂತ್ರವನ್ನು ರಚಿಸಿತು. ಅಹಿಂಸೆ, ಅಪರಿಗ್ರಹ, ಅನೇಕಾಂತ ಈ ಮೂರು ಜೈನಧರ್ಮದ ವಿಶ್ವಕಾಣಿಕೆಗಳು.

ಸಾಮಾನ್ಯಜೀವಿ ಪರಿಷ್ಕಾರಹೊಂದಿ ಪರಮಾತ್ಮನಾಗುವನೆಂದು ಜೈನರು ಹೇಳುವರು. ಈ ರೀತಿ ಪರಮಾತ್ಮರಾದವರನ್ನು ಇವರು ಜಿನೇಂದ್ರರೆಂದೂ ತೀರ್ಥಂಕರರೆಂದೂ ಪೂಜಿಸುವರು. ವರ್ಣಾಶ್ರಮಧರ್ಮವನ್ನು ಜೈನಧರ್ಮ ಮಾನ್ಯಮಾಡಿಲ್ಲ. ಯಾರು ಬೇಕಾದರೂ ಜೈನಧರ್ಮವನ್ನು ಸ್ವೀಕರಿಸಬಹುದು. ಧಾರ್ಮಿಕ ಔದಾರ್ಯವೇ ಜೈನಧರ್ಮದ ತಿರುಳು.

ಕ್ರಿಸ್ತಪೂರ್ವದಲ್ಲಿಯೇ ಬೌದ್ಧ ಧರ್ಮವು ಕರ್ನಾಟಕಕ್ಕೆ ಬಂದಿತು. ಈ ಧರ್ಮವನ್ನು ಇಲ್ಲಿನ ರಾಜರೂ ಪ್ರಜೆಗಳೂ ಸ್ವಾಗತಿಸಿದರು. 'ಆಸೆಯೇ ದುಃಖಕ್ಕೆ ಮೂಲ' ಇದು ಬುದ್ಧನ ಉಪದೇಶ. ದೇವರು, ಆತ್ಮ ಎಂಬ ಗಹನ ತತ್ವಗಳಿಗೆ ತಲೆಹಾಕದೆ ನೀತಿವಂತರಾಗಿ ಬಾಳುವುದನ್ನು ಕಲಿಯಿರಿ ಎಂದು ಬುದ್ಧ ಸಾರಿದನು. ಬೌದ್ಧ ಧರ್ಮವೂ ವರ್ಣಾಶ್ರಮವನ್ನು ಒಪ್ಪಿಲ್ಲ. ಯಾರು ಬೇಕಾದರೂ ಈ ಧರ್ಮವನ್ನು ಅನುಸರಿಸಬಹುದು. ಕ್ರಿ. ಶ. ಹನ್ನೆರಡನೆಯ ಶತಮಾನದತನಕ ಕರ್ನಾಟಕದಲ್ಲಿದ್ದ ಬೌದ್ಧ ಧರ್ಮವು ಕೊನೆಗೆ ನಿಶ್ಶೇಷವಾಗಿ ಹೋಯಿತು. ಜೈನಧರ್ಮ ಖಿಲವಾದರೂ ಈಗಲೂ ಕರ್ನಾಟಕದಲ್ಲಿ ಪ್ರಭಾವಶಾಲಿಯಾಗಿಯೇ ಇದೆ.

ಮಲೆಯಾಳದ ಶಂಕರಾಚಾರ್ಯರು ಕರ್ನಾಟಕಕ್ಕೆ ಆಗಮಿಸಿ ಅದ್ವೈತ ತತ್ವವನ್ನು ಬಿತ್ತಿದರು. ಶೃಂಗೇರಿಯಲ್ಲಿ ಕೇಂದ್ರವನ್ನು ಸ್ಥಾಪಿಸಿದರು. 'ನಾವು ಕಾಣುವ ಪ್ರಪಂಚವು ಮಾಯೆ. ಮಾಯೆಗೆ ಅವಿದ್ಯೆಯು ಕಾರಣ, ಮಾಯೆಯನ್ನು ಕಳಚಿದಾಗ ಮೋಕ್ಷವು ಲಭಿಸುವುದು. ಜೀವಾತ್ಮ ಮತ್ತು ಪರಮಾತ್ಮರೊಳಗೆ ಭೇದವಿಲ್ಲ' ಎಂದು ತಮ್ಮ ಅದ್ವೈತವನ್ನು ರೂಪಿಸಿದರು.

ರಾಮಾನುಜರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದರು. ಹೊಯ್ಸಳ ವಿಷ್ಣುವರ್ಧನನು ಜೈನಧರ್ಮವನ್ನು ತೊರೆದು ರಾಮಾನುಜರ ಕೈಯಲ್ಲಿ ಶ್ರೀವೈಷ್ಣವ ದೀಕ್ಷೆಯನ್ನು ಪಡೆದನು. ವಿಷ್ಣುವೇ ಪರಮ ಶ್ರೇಷ್ಠನೆಂದು ಇವರು ಸಾರಿದರು. ಇದೂ ಭಕ್ತಿಪಂಥವೇ. ಇದನ್ನು ವಿಶಿಷ್ಟಾದ್ವೈತವೆನ್ನುವರು. ಆತ್ಮ, ಅಚೇತನ ಜಗತ್ತು, ಈಶ್ವರ ಎಂಬ ಮೂರು ಪದಾರ್ಥಗಳಿವೆ. ದೇವರು ಒಬ್ಬನೇ ಸದ್ವಸ್ತು. ಉಳಿದುದೆಲ್ಲ ಆತನ ಪ್ರತಿಬಿಂಬ ಎಂಬ ಅದ್ವೈತ ತತ್ವವನ್ನು ಒಪ್ಪದೆ ಆತ್ಮ, ಅಚೇತನ ಜಗತ್ತು ಮತ್ತು ಈಶ್ವರ ಈ ಮೂರು ಒಂದೇ ಆಗಿ ಪರಮಾತ್ಮನೆನಿಸಿವೆ, ಜೀವಾತ್ಮನು



ಶ್ರೀ ಶಂಕರಾಚಾರ್ಯರ ಪುರಾತನಮೂರ್ತಿ, ಶೃಂಗೇರಿ


ಪರಮಾತ್ಮನಿಂದ ಭಿನ್ನನಲ್ಲ ಎಂದು ಸಾರಿದರು. ಉಳಿದ ಹಿಂದೂಧರ್ಮ ಪಂಥಗಳಿಗಿಂತ ಶ್ರೀವೈಷ್ಣವ ಪಂಥವು ಮತೀಯ ಔದಾರ್ಯವನ್ನು ಹೆಚ್ಚಾಗಿ ತೋರಿದೆ. ವರ್ಣಾಶ್ರಮಧರ್ಮದ ಕಟ್ಟುನಿಟ್ಟಾದ ಸಂಪ್ರದಾಯ



ಶ್ರೀ ರಾಮಾನುಜಾಚಾರ್ಯರ ಪ್ರತಿಮೆ, ತೊಂಡನೂರು

ಇದರಿಂದ ತುಸು ಸಡಿಲವಾದಂತಾಯಿತು. ಮೇಲುಕೋಟೆ ಈ ಧರ್ಮದ ಕೇಂದ್ರವಾಗಿದೆ.

ಕ್ರಿ. ಶ. ಹನ್ನೆರಡನೆಯ ಶತಮಾನದಲ್ಲಿ ಭಕ್ತಿಪಂಥಗಳು ಕರ್ನಾಟಕದಲ್ಲಿ ಕ್ರಾಂತಿಯೆಸಗಿದವು. ಒಂದು ಕಡೆ ಬಸವಣ್ಣನವರು 'ಶ್ವಪಚನಾದೊಡೇಂ ಶಿವಭಕ್ತನೇ ಕುಲಜನು' ಎಂದು ಸಾರಿದರು. ಕಾಯಕವೇ ಕೈಲಾಸವೆಂದು ಕ್ರಾಂತಿಯ ಕಹಳೆಯೂದಿ ಶೈವಪಂಥಗಳನ್ನು ಕ್ರೋಡೀಕರಿಸಿ ವೀರಶೈವ ಧರ್ಮವನ್ನು ಹರಡಿದರು. ಬ್ರಾಹ್ಮಣರಿಂದ ಅಂತ್ಯಜರ ತನಕ ವೀರಶೈವ



ಶ್ರೀ ಬಸವೇಶ್ವರರ ಪ್ರತಿಮೆ, ಬಾಗೇವಾಡಿ

ಧರ್ಮವನ್ನು ಸ್ವೀಕರಿಸಿದರು. ಷಟ್‌ಸ್ಥಲಗಳನ್ನು ಕ್ರಮವಾಗಿ ಪ್ರಾಪ್ತಿ ಮಾಡಿಕೊಂಡು ಭಕ್ತನು ಶಿವೈಕ್ಯನಾಗುವನೆಂದು ವೀರಶೈವರು ಹೇಳುವರು.

ಮಧ್ವಾಚಾರ್ಯರು ದ್ವೈತ ತತ್ವವನ್ನು ಕರ್ನಾಟಕದಲ್ಲಿ ಹರಡಿದರು. ಇದೂ ವೈಷ್ಣವಧರ್ಮವೇ ಆಗಿದೆ. 'ಹರಿಯೆ ಪರಬ್ರಹ್ಮ. ಜಗತ್ತು ಸತ್ಯ. ಜೀವಾತ್ಮ ಮತ್ತು ಪರಮಾತ್ಮರಲ್ಲಿ ಭೇದವಿದೆ, ಜೀವರಾಶಿಯೆಲ್ಲ ಹರಿಯ ಅನುಚರರು. ಹರಿ ಉಚ್ಚ, ಉಳಿದ ಜೀವರು ಹರಿಯಂತೆ ಉಚ್ಚರಲ್ಲ. ಮುಕ್ತಿಗೆ ನಿರ್ಮಲಭಕ್ತಿಬೇಕು' ಎಂದು ಮಧ್ವಮತವು ಹೇಳುವುದು. ಶೂದ್ರರೂ ಮಧ್ವಮತವನ್ನು ಅನುಸರಿಸಿದ ಸಂದರ್ಭಗಳಿವೆ. ಆದ್ದರಿಂದ ಈ ಧರ್ಮವೂ ಔದಾರ್ಯಪೂರ್ಣವಾದುದು.



ಶ್ರೀ ಮಧ್ವಾಚಾರ್ಯರ ಶಿಲಾಮೂರ್ತಿ, ಪಾಜಕ ಕ್ಷೇತ್ರ

ಇಸ್ಲಾಂಧರ್ಮವೂ ಕರ್ನಾಟಕಕ್ಕೆ ಬಂದು ಪ್ರಸಾರವಾಯಿತು. ಬಹು ಜನರನ್ನು ಇಸ್ಲಾಂಧರ್ಮಕ್ಕೆ ಸೆಳೆದುಕೊಂಡರು. ರಾಜಕೀಯದಲ್ಲಿಯೂ ಈ ಧರ್ಮದ ಅರಸರು ಪ್ರಭಾವಶಾಲಿಗಳಾಗಿ ಸಮಾಜದಲ್ಲಿ ವರ್ಚಸ್ಸನ್ನು ಬೀರಿದರು. ವಿಗ್ರಹಾರಾಧನೆಯನ್ನು ಇಸ್ಲಾಂಧರ್ಮವು ಖಂಡಿಸುವುದು.

ಕ್ರೈಸ್ತಧರ್ಮವೂ ಈಗ ಕರ್ನಾಟಕದಲ್ಲಿ ಸಾಕಷ್ಟು ಪ್ರಚಾರವಾಗಿದೆ. ಇಲ್ಲಿಯ ದೀನದಲಿತರಿಗೆ ಧರ್ಮದೀಕ್ಷೆ ಕೊಟ್ಟು ಅವರಲ್ಲಿ ವಿದ್ಯೆಯನ್ನು ಹರಡಿ ಜಾಗೃತಿಯನ್ನು ಈ ಧರ್ಮವು ತಂದುಕೊಟ್ಟಿದೆ. ಏಸುಕ್ರಿಸ್ತನನ್ನು ಮಾರ್ಗದರ್ಶಕನೆಂದು ಇವರು ನಂಬುವರು. ಬಂದವರನ್ನೆಲ್ಲ ಸ್ವಾಗತಿಸುವುದೇ ಈ ಧರ್ಮದ ಗುರಿಯಾಗಿದೆ.

ವೇದ ಉಪನಿಷತ್ತು ಮತ್ತು ಭಗವದ್ಗೀತೆಗಳು ಹಿಂದೂಧರ್ಮದ ವಿವಿಧ ಮುಖಗಳಾದ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಎಂಬ

ಮೂರು ಪಂಥಗಳಿಗೂ ಧರ್ಮಗ್ರಂಥಗಳಾಗಿವೆ. ತತ್ವಾರ್ಥಸೂತ್ರವು ಜೈನ ಧರ್ಮದ ಪವಿತ್ರಗ್ರಂಥವಾಗಿದೆ. ತ್ರಿಪಿಟಿಕಗಳು ಬೌದ್ಧ ಧರ್ಮದ ಆಧಾರ ಗ್ರಂಥಗಳಾಗಿವೆ. ಶೈವಾಗಮಗಳೂ ವಚನಸಾಹಿತ್ಯವೂ ಶಕ್ತಿವಿಶಿಷ್ಟಾ ದ್ವೈತವಾದ ವೀರಶೈವಧರ್ಮಕ್ಕೆ ಪೂಜ್ಯ ಗ್ರಂಥಗಳಾಗಿವೆ. ಕುರಾನ್ ಮಹಮದೀಯರ ಧರ್ಮಗ್ರಂಥವಾಗಿದೆ. ಬೈಬಲ್ ಕ್ರೈಸ್ತಧರ್ಮದ ಪಾವನ ಗ್ರಂಥವಾಗಿದೆ. ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಅನೇಕ ಧರ್ಮಗಳು ಕರ್ನಾಟಕದಲ್ಲಿ ನೆಲೆನಿಂತಿವೆ. ಧರ್ಮಾಭಿಮಾನಿಗಳಾದ ಕನ್ನಡಿಗರು ಈ ಧಾರ್ಮಿಕ ಪ್ರವಾಹದಲ್ಲಿ ಮುಳುಗಿ ಮಡಿವಂತರಾಗಿರುವರು.

ದೇವಸ್ಥಾನಗಳು

ದೇವಸ್ಥಾನಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಪವಿತ್ರ ವಾತಾವರಣವನ್ನು ಇವು ನಿರ್ಮಿಸಿದ್ದವು. ಬೌದ್ಧರು ಚೈತ್ಯಾಲಯ ಗಳಿಂದೂ, ಜೈನರು ಬಸದಿಗಳಿಂದೂ ಮಹಮದೀಯರು ಮಸೀದಿಗಳಿಂದೂ, ಕ್ರೈಸ್ತರು ಚರ್ಚುಗಳಿಂದೂ ತಂತಮ್ಮ ಪವಿತ್ರಸ್ಥಾನಗಳನ್ನು ಕರೆಯುವರು. ಇವೆಲ್ಲ ವಿದ್ಯಾಕೇಂದ್ರಗಳಾಗಿ ನ್ಯಾಯಾಲಯಗಳಾಗಿ, ಧಾರ್ಮಿಕ ಉತ್ಸವ ರಂಗಗಳಾಗಿ, ಜನಜೀವನವನ್ನು ಉತ್ತಮಪಡಿಸಿದವು. ಬಾದಾಮಿಯ ಗುಹಾಂತರ ದೇವಾಲಯಗಳೂ, ಶ್ರವಣಬೆಳಗುಳದ ಬಸದಿಗಳೂ, ಪಟ್ಟದ ಕಲ್ಲಿನ ಶಿವಾಲಯಗಳೂ, ಬಿಜಾಪುರದ ಮಸೀದಿಗಳೂ, ಅಲ್ಲಲ್ಲಿ ಇರುವ ಚರ್ಚುಗಳೂ ಇಂದಿಗೂ ಪ್ರೇಕ್ಷಣೀಯ ಸ್ಥಳಗಳಾಗಿವೆ. ಮೇಲುಕೋಟೆ, ಉಡುಪಿ, ಕಾರ್ಕಳ, ಧರ್ಮಸ್ಥಳ, ಹುಂಚ, ಬಿಳಿಗಿರಿರಂಗನಬೆಟ್ಟ, ಮಹದೇಶ್ವರ ಬೆಟ್ಟ, ಸವದತ್ತಿ ಎಲ್ಲಮ್ಮ, ಕೂಡಲಸಂಗಮ ಈ ಕ್ಷೇತ್ರಗಳು ದಿನವೂ ಯಾತ್ರಿಕರನ್ನು ಆಕರ್ಷಿಸುತ್ತಿವೆ.

ಪವಿತ್ರ ಸ್ಥಳಗಳ ಪ್ರಾಮುಖ್ಯತೆ ಇಳಿಮುಖವಾಗುತ್ತಿದ್ದರೂ ಶ್ರವಣ ಬೆಳಗುಳ, ಮಹದೇಶ್ವರಬೆಟ್ಟ, ಉಡುಪಿ, ಬಸವಕಲ್ಯಾಣ, ಸವದತ್ತಿ ಎಲ್ಲಮ್ಮ, ಧರ್ಮಸ್ಥಳ ಇವು ಇಂದಿಗೂ ಜಾಗ್ರತ ಕ್ಷೇತ್ರಗಳಾಗಿವೆ. ಸಾಮಾಜಿಕ ಜೀವನದ ಮೇಲೆ ಈ ಕ್ಷೇತ್ರಗಳು ಪ್ರಭಾವ ಬೀರುತ್ತಿವೆ. ಮಾನಸಿಕ ಗೊಂದಲಕ್ಕೆ ಸಿಕ್ಕಿದವರನ್ನು ಆಕರ್ಷಿಸಿ ಅವು ನೆಮ್ಮದಿಯನ್ನು ನೀಡುತ್ತಿರುವು ದನ್ನು ಅಲ್ಲಗಳೆಯಲಾದೀತೆ ? ಶ್ರವಣಬೆಳಗುಳದ ಗೋಮಟ ಮಸ್ತಕಾಭಿಷೇಕ, ಮೇಲುಕೋಟೆಯ ಚಲುವನಾರಾಯಣನ ವೈರಮುಡಿ, ಉಡುಪಿಯ ಪರ್ಯಾ

ಯೋತ್ಸವ, ಧರ್ಮಸ್ಥಳದ ಲಕ್ಷದೀಪೋತ್ಸವ, ಮಹದೇಶ್ವರನ ಶಿವರಾತ್ರಿ, ತಲಕಾಡಿನ ಪಂಚಲಿಂಗದರ್ಶನ–ಈ ಧಾರ್ಮಿಕ ಉತ್ಸವಗಳು ಈ ವೈಜ್ಞಾನಿಕ ಯುಗದಲ್ಲಿಯೂ ವೈಭವಯುತವಾಗಿ ನಡೆಯುತ್ತಿವೆ. ಲಕ್ಷೋಪಲಕ್ಷಮಂದಿ ಭಕ್ತರು ಮೈಮರೆತು ಈ ಉತ್ಸವಗಳಲ್ಲಿ ಭಾಗವಹಿಸುತ್ತಿರುತ್ತಾರೆ.

ಬಾದಾಮಿಯ ಗುಹಾಂತರ ದೇಗುಲಗಳು ಅಂದಿನ ಸಾಹಸಯುತವಾದ ಜನಜೀವನಕ್ಕೆ ಸಾಕ್ಷಿಯಾಗಿವೆ. ಬೆಟ್ಟದ ಹೊಟ್ಟೆಯನ್ನು ಸೀಳಿ ಕಲಾವೈಭವವನ್ನು ಅಂದಿನ ಶಿಲ್ಪಿಗಳು ಹೊರಗೆಳೆದಿರುವರು. ಕಲ್ಲಿನಲ್ಲಿಯೂ ಬೆಣ್ಣೆ ತೆಗೆದಿರುವರು. ಪಟ್ಟದಕಲ್ಲಿನ ದೇಗುಲಗಳಲ್ಲಿ ವಾಸ್ತುಶಿಲ್ಪ ಸಾಕಾರಗೊಂಡಿದೆ. ಶ್ರವಣಬೆಳಗುಳದ ಗೊಮ್ಮಟ ಮಹಾಮೂರ್ತಿಯ ಭವ್ಯಾಕಾರದಲ್ಲಿ ಅಂದಿನ ಜನತೆಯ ಆದರ್ಶ, ಅನ್ಯಾಯವನ್ನು ಮೆಟ್ಟಿ ತುಳಿಯುವ ಛಲ, ರಾಗದ್ವೇಷಗಳ ನಡುವೆ ಸಿಕ್ಕಿಯೂ ಸಿಕ್ಕದಂತೆ ಬಾಳಿ ಭಗವಂತನಾಗುವ ರಹಸ್ಯವನ್ನು ಶಿಲ್ಪಿ ರೂಪಿಸಿರುವನು. ಕಲೆಗೂ ಜನಜೀವನಕ್ಕೂ ನಿಕಟಸಂಬಂಧವಿದೆ.

ಹಳೆಯಬೀಡು ಮತ್ತು ಬೇಲೂರಿನ ಬಳಪದ ಕಲ್ಲಿನ ದೇಗುಲಗಳ ಭಿತ್ತಿಯಲ್ಲಿ ಕನ್ನಡ ಕಲಾಸಾಮ್ರಾಜ್ಯದ ವೈಭವವನ್ನು ಶಿಲ್ಪಿಗಳು ಎರಕಹೊಯ್ದಿರುವರು. ಅಂದಿನ ಜನತೆಯ ರಸಿಕತೆಯನ್ನು ಬಂಡೆಬಂಡೆಯಲ್ಲಿಯೂ ಕಂಡರಿಸಿರುವರು. ವೀರ, ಶೃಂಗಾರ, ಹಾಸ್ಯ ಮುಂತಾದ ಭಾವಗಳನ್ನು ಭಟ್ಟಿಯಿಳಿಸಿ ಶಿಲ್ಪದ ನಾನಾಭಂಗಿಗಳಲ್ಲಿ ಸುರಿದಿರುವರು. ಶಿಲಾಬಾಲಕಿಯರು ಅಂದಿನ ಸ್ತ್ರೀಯರ ಹಾವ, ಭಾವ, ವಿಲಾಸ, ವಿಭ್ರಮಗಳನ್ನು ಕಲಾವಂತಿಕೆಯಿಂದ ಮೆರೆದಿರುವರು. ಕನ್ನಡಿಗರ ನಯನಾಜೂಕನ್ನು ಹೊಯ್ಸಳ ಶಿಲ್ಪದಲ್ಲಿ ನಾವು ಕಾಣಬಹುದು. ಕನ್ನಡಿಗರ ಭಕ್ತಿಯನ್ನು ಈ ಭವ್ಯ ದೇಗುಲಗಳಲ್ಲಿ ನಾವು ನೋಡಬಹುದು. ಒಟ್ಟಿನಲ್ಲಿ ಕನ್ನಡಿಗರು ಸಾಹಸಿಗಳು, ರಸಿಕರು, ಭಕ್ತರು.

ನಾಟ್ಯದ ನಾನಾಭಂಗಿಗಳನ್ನು ಶಿಲಾಬಾಲಕಿಯರು ಪ್ರದರ್ಶಿಸಿರುವರು. ಸಂಗೀತದ ವಾದ್ಯವೈಖರಿಯನ್ನೂ ಈ ಶಿಲ್ಪದಲ್ಲಿ ನಾವು ಕಾಣಬಹುದು. ವಿಜಯನಗರದ ದೇಗುಲದಲ್ಲಿ ಸಪ್ತಸ್ವರಗಳನ್ನು ನುಡಿಯುವ ಕಂಬಗಳಿವೆ. ಹಳೆಯಬೀಡಿನ ವಿಜಯಪಾರ್ಶ್ವನಾಥ ದೇವಾಲಯದ ಸ್ತಂಭಗಳು ಇಂದಿನ ಕನ್ನಡಿ ರಚನೆಯನ್ನು ನಾಚಿಸುವುವು.

ಹಿಂದೆ ಮಲ್ಲಯುದ್ಧವು ಜನಪ್ರಿಯವಾದ ವಿಹಾರವಾಗಿದ್ದಿತು. ರಾಜಧಾನಿಗಳಲ್ಲಿ ಗರಡಿ ಮನೆಗಳಿದ್ದವು. ಇವಕ್ಕೆ ರಾಜರು ಪ್ರೋತ್ಸಾಹ ಕೊಟ್ಟ



ಕರ್ನಾಟಕ ಕಲಾವೈಭವ, ಬೇಲೂರು

ದ್ದರು. ಇಲ್ಲಿ ಮಲ್ಲವಿದ್ಯೆಯನ್ನು ಕಲಿಸುತ್ತಿದ್ದರು. ಮಹಾನವಮಿ ಉತ್ಸವದಲ್ಲಿ ರಾಜನ ಸಮ್ಮುಖದಲ್ಲಿ ಮಲ್ಲಯುದ್ಧವನ್ನು ಯೋಧರು ನಡೆಸಿ ಜನರನ್ನು ಬೆರಗುಗೊಳಿಸುತ್ತಿದ್ದರು. ಕೆಲವು ರಾಜರಿಗೆ 'ಗಜಬೇಂಟೆಕಾರ' ಎಂಬ ಬಿರುದುಗಳೂ ಇದ್ದುದಕ್ಕೆ ಶಾಸನಗಳಿವೆ.

ಚಿತ್ರಕಲೆ ರಾಜಾಶ್ರಯದಲ್ಲಿ ಅರಳಿತು. ದೇಗುಲಗಳ ಭಿತ್ತಿಗಳಲ್ಲಿ, ಚಾವಣಿಗಳಲ್ಲಿ ಚಿತ್ರಕಾರರು ತಂತಮ್ಮ ಭಾವನೆಯ ಕಾಮನಬಿಲ್ಲನ್ನು ಬಿಡಿಸಿರುವರು. ಪೌರಾಣಿಕ ಪ್ರಸಂಗಗಳಿಗೆ ಬಣ್ಣತೊಡಿಸಿರುವರು. ಕೆಲವೊಮ್ಮೆ ಐತಿಹಾಸಿಕ ಘಟನೆಗಳನ್ನೂ ಚಿತ್ರಿಸಿರುವರು. ಅಜಂತದ ಗವಿಯಲ್ಲಿ ಕನ್ನಡ ಚಕ್ರೇಶ್ವರ ಚಾಲುಕ್ಯ ಪುಲಿಕೇಶಿಯು ಫಾರಸೀದೇಶದ ರಾಜದೂತನಿಗೆ ಸ್ವಾಗತ ನೀಡುವ ಚಿತ್ರವಿದೆ. ಫಾರಸೀ ದೇಶದ ದೊರೆಯೂ ಪುಲಿಕೇಶಿಯ ಮಿತ್ರನೂ ಆದ ಖುಸ್ರುವಿನ ಹಾಗೂ ಅವನ ಪತ್ನಿಯ ಚಿತ್ರಗಳಿವೆ. ಶ್ರವಣಬೆಳಗುಳದ ಶ್ರೀಮಠದ ಗೋಡೆಯಲ್ಲಿ ಮೈಸೂರಿನ ದಸರಾ ವೈಭವವನ್ನು ಚಿತ್ರಿಸಿರುವರು. ಶ್ರೀರಂಗಪಟ್ಟಣದ ದರಿಯಾದೌಲತ್ ಕಟ್ಟಡದಲ್ಲಿ ಟಿಪ್ಪು ಮತ್ತು ಇಂಗ್ಲಿಷರ ನಡುವಣ ಹೋರಾಟವನ್ನೂ ಮೀರಸಾದಕನ ಸ್ವಾಮಿದ್ರೋಹವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವರು.

ವಿದ್ಯೆ–ಲಲಿತಕಲೆ–ಸಾಹಿತ್ಯ

'ಕುರಿತು ಓದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂದು ಕವಿರಾಜಮಾರ್ಗದಲ್ಲಿ (ಒಂಬತ್ತನೆಯ ಶ.ಮಾ.) ಗ್ರಂಥಕರ್ತ, ಕನ್ನಡಿಗರ ಹಿರಿಮೆಯನ್ನು ಸಾರಿರುವನು. ಶಿಕ್ಷಣ ಸಂಸ್ಥೆಗಳು ಹಿಂದೆ ಬಹುಮಟ್ಟಿಗೆ ಮಠಗಳಲ್ಲಿಯೇ ನಡೆಯುತ್ತಿದ್ದವು. ಜೈನ, ಬೌದ್ಧ ಹಾಗೂ ಹಿಂದೂಮಠಾಧಿಪತಿಗಳು ತಂತಮ್ಮ ಕೇಂದ್ರಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಧರ್ಮಾರ್ಥವಾಗಿ ಬೋಧಿಸುತ್ತಿದ್ದರು. ಸಕಲವಿದ್ಯೆಗಳನ್ನೂ ಹೇಳಿಕೊಡುವ ವ್ಯವಸ್ಥೆಯಿದ್ದಿತು. ಘಟಿಕೆಗಳು, ಅಗ್ರಹಾರಗಳು, ಬ್ರಹ್ಮಪುರಿಗಳು — ಈ ಹೆಸರಿನ ವಿದ್ಯಾಕೇಂದ್ರಗಳೂ ಇದ್ದವು. ಘಟಿಕಾಸ್ಥಾನಗಳು ವಿಶ್ವವಿದ್ಯಾನಿಲಯಗಳಂತೆ ಇದ್ದವು. ಬಂಕಾಪುರದಲ್ಲಿ ಹತ್ತನೆಯ ಶತಮಾನದ ಅಜಿತಸೇನಾ

ಚಾರ್ಯರು ಕುಲಪತಿಗಳಾಗಿ ಘಟಿಕಾಸ್ಥಾನವನ್ನು ನೋಡಿಕೊಳ್ಳುತ್ತಿದ್ದರು. ಹಾಸನ ಜಿಲ್ಲೆಯ ಸರ್ವಜ್ಞಪುರ, ಶಿವಮೊಗ್ಗ ಜಿಲ್ಲೆಯ ನಾಗರಖಂಡ ಮತ್ತು ಕೆಲ್ಲಂಗ ಈ ಮೂರು ಸ್ಥಳಗಳೂ ಅಗ್ರಹಾರಗಳಾಗಿ ವಿದ್ಯಾಕೇಂದ್ರ ಗಳಾಗಿದ್ದವು. ಬಳ್ಳಿಗಾವಿಯಲ್ಲಿ ಮೂರು ಪುರಗಳು, ಏಳು ಬ್ರಹ್ಮಪುರಿಗಳು ಇದ್ದವು. ಇವೆಲ್ಲ ಶಿಕ್ಷಣಸಂಸ್ಥೆಗಳಾಗಿದ್ದವು. ಇವುಗಳಲ್ಲಿ ಧಾರ್ಮಿಕ ಹಾಗು ಲೌಕಿಕ ವಿದ್ಯೆಗಳನ್ನು ಬೋಧಿಸುತ್ತಿದ್ದರು. ರಾಜರುಗಳು ಈ ವಿದ್ಯಾ ಕೇಂದ್ರಗಳಿಗೂ ಅಧ್ಯಾಪಕರಿಗೂ ಉಂಬಳಿ ಹಾಕಿಕೊಟ್ಟು ಪ್ರೋತ್ಸಾಹ ನೀಡಿದ್ದರು. ಈ ಸಂಸ್ಥೆಗಳು ಗುರುಕುಲ ಪದ್ಧತಿಯಲ್ಲಿ ವಿದ್ಯಾಪ್ರಸಾರ ವನ್ನು ಮಾಡುತ್ತಿದ್ದವು; ಹೃದಯಸಂಸ್ಕಾರ, ಬುದ್ಧಿವೈಶಾಲ್ಯ, ವಿವೇಕ, ಸ್ಥೈರ್ಯ, ಸಹನೆ ಈ ಉದಾತ್ತ ಗುಣಗಳನ್ನು ಬಿತ್ತುತ್ತಿದ್ದವು. ಈ ಗುರು ಕುಲಪದ್ಧತಿ ಈಗ ನಶಿಸಿಹೋಗಿದೆ.

ಧಾರ್ಮಿಕದೃಷ್ಟಿ ಮಾಯವಾಗಿದೆ. ಅತಿಯಾದ ಲೌಕಿಕದೃಷ್ಟಿಯಿಂದ ನಮ್ಮ ವಿದ್ಯಾಭ್ಯಾಸ ಕಲುಷಿತವಾಗುತ್ತಿದೆ. 'ಹಿಂದೆ ಗುರುವಿದ್ದ ಮುಂದೆ ಗುರಿಯಿತ್ತು. ಈಗ ಗುರುವೂ ಇಲ್ಲ, ಗುರಿಯೂ ಇಲ್ಲ' ಎಂಬುದಾಗಿ ರಾಷ್ಟ್ರ ಕವಿ ಕುವೆಂಪು ಹಿಂದಿನ ಮತ್ತು ಇಂದಿನ ವಿದ್ಯಾಭ್ಯಾಸವನ್ನು ವಿಮರ್ಶಿ ಸಿರುವರು.

ನೃತ್ಯ, ಸಂಗೀತ, ಚಿತ್ರ ಈ ಕಲೆಗಳಲ್ಲಿ ರಾಜಸ್ತ್ರೀಯರು ಪ್ರವೀಣ ರಾಗಿದ್ದರು. ಶ್ರೀಮಂತರ ಮಕ್ಕಳೂ ಅವನ್ನು ಕಲಿಯುತ್ತಿದ್ದರು. ದೇವದಾಸಿ ವಂಶವು ಈ ವಿದ್ಯೆಗಳ ತೌರುಮನೆಯಾಗಿ – ವೇಣು, ಸಮುದ್ರಘೋಷ, ಕಟುಮುಖ, ವಾದಿತ್ರ, ತಂತ್ರೀಕಾಲ, ವೀಣೆ, ತೂರ್ಯ ಮುಂತಾದ ವಾದ್ಯಗಳನ್ನು ಬಳಸುತ್ತಿದ್ದರು. ವಿಷ್ಣುವರ್ಧನನ ಪ್ರಿಯತಮೆ ಶಾಂತಲ ಅಂದಿಗೆ ನಾಟ್ಯವಿಶಾರದೆಯಾಗಿದ್ದಳು. ರಾಜರುಗಳು ಎಲ್ಲ ಲಲಿತಕಲೆಗಳಿಗೂ ಉದಾರವಾಗಿ ಪ್ರೋತ್ಸಾಹ ನೀಡುತ್ತಿದ್ದರು. ಚಿತ್ರಕಲೆಯೂ ಜೀವಂತ ವಾಗಿದ್ದಿತು.

ಈಗ ಪ್ರಜಾಸರ್ಕಾರವೂ ಈ ಕಲೆಗಳ ಕಡೆ ಗಮನಹರಿಸಿದೆ. ಕಲಾವಂತ ರಿಗೆ ಸನ್ಮಾನ, ಮಾಸಾಶನಗಳನ್ನು ನೀಡಿ ಪ್ರೋತ್ಸಾಹಿಸುವುದರ ಜೊತೆಗೆ ಶಿಕ್ಷಣ ನೀಡುವ ಕಲಾಕೇಂದ್ರಗಳಿಗೂ ಸಹಾಯ ನೀಡುತ್ತಿದೆ.

ಕ್ರಿ. ಶ. ಒಂಬತ್ತನೆಯ ಶತಮಾನದಲ್ಲಿ ನೃಪತುಂಗನ ಪ್ರೇರಣೆಯಿಂದ

ರಚಿತವಾದ ಕವಿರಾಜಮಾರ್ಗದಲ್ಲಿ ಗದ್ಯ ಪದ್ಯ ಕವಿಗಳ ಹೆಸರನ್ನು ಕೊಟ್ಟಿರುವರು. ಆದರೆ ನಮಗೆ ದೊರೆತ ಕನ್ನಡ ಗ್ರಂಥಗಳಲ್ಲಿ ಮೊದಲನೆಯ ಕೃತಿಯೇ ಕವಿರಾಜಮಾರ್ಗ. ಇದೇ ಕಾಲದಲ್ಲಿ ಜೈನಾಚಾರ್ಯರು ಸಂಸ್ಕೃತ ಮತ್ತು ಪ್ರಾಕೃತ ಭಾಷೆಯಲ್ಲಿ ಹೇರಳವಾಗಿ ಸಾಹಿತ್ಯವನ್ನು ರಚಿಸಿದರು.

ಕ್ರಿ. ಶ. ೧೦ನೆಯ ಶತಮಾನದ ಪ್ರಾರಂಭದಲ್ಲಿ ವಡ್ಡಾರಾಧನೆ ಎಂಬ ಗದ್ಯಗ್ರಂಥ ರೂಪಗೊಂಡಿತು. ಜೈನ ಯತಿಗಳ ದೃಢವ್ರತವನ್ನು, ಅವರು ಮರಣವನ್ನು ಮಹಾನವಮಿಯೆಂದು ಧೀರರಾಗಿ ಸ್ವಾಗತಿಸಿದ್ದನ್ನು ವಿವರಿಸುವ ೧೯ ಕಥೆಗಳು ಈ ಕೃತಿಯಲ್ಲಿವೆ. ಪಂಪನ ಆದಿಪುರಾಣ, ವಿಕ್ರಮಾರ್ಜುನವಿಜಯ, ಪೊನ್ನನ ಶಾಂತಿಪುರಾಣ, ರನ್ನನ ಸಾಹಸ ಭೀಮವಿಜಯ, ಮತ್ತು ಅಜಿತಪುರಾಣ, ಚಾಮುಂಡರಾಯನ ಚಾಮುಂಡರಾಯಪುರಾಣ ಈ ಕೃತಿಗಳು ಹತ್ತನೆಯ ಶತಮಾನದ ಕನ್ನಡ ಮಹಾಕೃತಿಗಳಾಗಿವೆ. ಪಂಪನ ಹಾದಿಯಲ್ಲಿ ನಾಗಚಂದ್ರ, ಜನ್ನ, ನೇಮಿಚಂದ್ರ ಮುಂತಾದವರು ಕಾವ್ಯರಚನೆ ಮಾಡಿ ಕನ್ನಡವನ್ನು ಬೆಳೆಸಿದರು.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಧಾರ್ಮಿಕ ಕ್ರಾಂತಿಯ ಪ್ರಭಾವ ಕನ್ನಡ ಸಾಹಿತ್ಯದ ಮೇಲೆಯೂ ಆಗಿ ವಚನ ಸಾಹಿತ್ಯದ ಪ್ರವಾಹವೇ ಹರಿಯಿತು. ನೂರಾರು ಜನ ವಚನಕಾರರು ಕಾಣಿಸಿಕೊಂಡರು. ಹಲವಾರು ಮಂದಿ ಸ್ತ್ರೀಯರು ವಚನಕಾರ್ತಿಯರಾದರು. ವೀರಶೈವ ಕವಿಗಳಲ್ಲಿ ಹರಿಹರ ಮೊದಲನೆಯವನು. ಇವನು ನೂರಾರು ರಗಳೆಗಳನ್ನು ರಚಿಸಿದನು. ನಡುಗನ್ನಡವನ್ನು ಬಳಸಿದನು. ಇವನ ಗಿರಿಜಾಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಚಾಮರಸನ ಪ್ರಭುಲಿಂಗಲೀಲೆ ಉತ್ತಮ ಕೃತಿಗಳಾಗಿವೆ.

೧೫ನೆಯ ಶತಮಾನದಲ್ಲಿ ಕುಮಾರವ್ಯಾಸನು ಕೃಷ್ಣಚರಿತಾಮೃತವೆಂದು ಮಹಾಭಾರತವನ್ನು ರಚಿಸಿ ಭಕ್ತಕವಿಯೆನಿಸಿದನು. ಹರಿದಾಸರು ಬಂದು ಕೀರ್ತನೆಗಳನ್ನು ಹಾಡಿದರು. ಸರ್ವಜ್ಞನು ತ್ರಿಪದಿಯಲ್ಲಿ ವಚನಗಳನ್ನು ಹಾಡಿ ಅಂದಿನ ಜನತೆಯನ್ನು ವಿಮರ್ಶಿಸಿದನು. ಲೋಕವಿಮರ್ಶೆಯೇ ಇವನ ಕೃತಿಯ ಜೀವಾಳ.

ರತ್ನಾಕರ ಭರತೇಶವೈಭವವನ್ನು ಸಾಂಗತ್ಯದಲ್ಲಿ ರಚಿಸಿ ಜಿನಭಕ್ತಿಗೆ ಮೆರಗುಕೊಟ್ಟನು. ಲಕ್ಷ್ಮೀಶ ಜೈಮಿನಿ ಭಾರತವನ್ನು ಷಟ್ಪದಿಯಲ್ಲಿ ರಚಿಸಿ

ವೈಷ್ಣವ ಭಕ್ತಿಗೆ ಒಪ್ಪಹಾಕಿದನು. ಷಡಕ್ಷರಿ, ನಿಜಗುಣ ಶಿವಯೋಗಿಗಳು ವೀರಶೈವ ಸಾಹಿತ್ಯವನ್ನು ಜನತೆಗೆ ಕೊಟ್ಟರು.

ಲಕ್ಷ್ಮೀನಾರಣಪ್ಪನು ರಾಮಾಶ್ವಮೇಧವನ್ನು ರಚಿಸಿ ಹೊಸಗನ್ನಡ ಯುಗವನ್ನು ಹಳಗನ್ನಡದಲ್ಲಿ ಉದ್ಘಾಟನೆ ಮಾಡಿದನು. ಅನಂತರ ಬಿ. ಎಂ. ಶ್ರೀಯವರೂ, ತಳುಕಿನ ವೆಂಕಣ್ಣಯ್ಯನವರೂ, ಎ. ಆರ್. ಕೃಷ್ಣಶಾಸ್ತ್ರಿಗಳೂ ಕನ್ನಡವನ್ನು ಉದ್ಧರಿಸುವಂಥ ಶಿಷ್ಯಪರಂಪರೆಯನ್ನು ಸೃಷ್ಟಿಸಿದರು. ಇಂದು ಕನ್ನಡವು ವಿಪುಲವಾಗಿ ಬೆಳದಿದೆ. ರಾಷ್ಟ್ರಕವಿ ಹಾಗು ಜ್ಞಾನಪೀಠದ ಬಹುಮಾನವನ್ನು ಪಡೆದ ಕು. ವೆಂ. ಪು. ರವರು ಕನ್ನಡದ ಕಣ್ಣಾಗಿರುವರು. ರಾಮಾಯಣ ಮಹಾದರ್ಶನವನ್ನು ರಚಿಸಿ ಅಮರರಾಗಿರುವರು. ದ. ರಾ. ಬೇಂದ್ರೆಯವರು ಡಾ. ಶಿವರಾಮ ಕಾರಂತರು ಜ್ಞಾನಪೀಠದ ಬಹುಮಾನ ವನ್ನು ಪಡೆದ ಮಹಿಮಾನ್ವಿತರಾಗಿರುವರು.

ಕಾದಂಬರಿ ಸಾಹಿತ್ಯಕ್ಕೆ ಶಿವರಾಮ ಕಾರಂತರು ಗೌರವ ತಂದುಕೊಟ್ಟಿ ರುವರು. ದಿವಂಗತ ಅ. ನ. ಕೃಷ್ಣರಾಯರು ಕಾದಂಬರಿಗಳನ್ನು ರಚಿಸಿ ಅಮರರಾಗಿರುವರು. ನಿಸರ್ಗವನ್ನು ಬರೆದು ಮಿರ್ಜಿ ಅಣ್ಣಾರಾಯರು ಕೀರ್ತಿಶೇಷರಾಗಿರುವರು. ಕನ್ನಡ ಸಾಹಿತ್ಯ ಪಂಪನಿಂದ ಕುವೆಂಪುತನಕ ಬೆಳೆದುಬಂದಿದೆ. ಈ ಸಹಸ್ರ ವರ್ಷದಲ್ಲಿ ನೂರಾರು ಜನ ಕವಿಗಳಾಗಿ ಹೋಗಿ ರುವರು. ಕಾಲಕಾಲಕ್ಕೆ ಹೊಸ ಪ್ರಯೋಗಗಳನ್ನು ಮಾಡಿ ಏಕತಾನತೆಯನ್ನು ಇವರು ತಪ್ಪಿಸಿರುವರು.

ಕರ್ನಾಟಕದ ಕನ್ಯಾರತ್ನಗಳು

ಕರ್ನಾಟಕದ ಸ್ತ್ರೀಯರು ಪುರಾತನಕಾಲದಿಂದಲೂ ಗೌರವಾನ್ವಿತರಾಗಿ ರುವರು. ಅರಸಿಯರೂ ರಾಜ್ಯಭಾರವನ್ನು ನಡೆಸಿರುವರು. ಕಲ್ಯಾಣ ಚಾಲುಕ್ಯರ ಚಂದ್ರಾದಿತ್ಯನ ಅರಸಿ ವಿಜಯಭಟ್ಟಾರಿಕೆಯು ರಾಜ್ಯಭಾರವನ್ನು ನಿರ್ವಹಿಸಿರುವಳು. ಈಕೆಯೇ 'ಕೌಮುದೀ ಮಹೋತ್ಸವ' ಎಂಬ ಕಾವ್ಯ ವನ್ನು ರಚಿಸಿರುವಳು. ಹೊಯ್ಸಳ ವಿಷ್ಣುವರ್ಧನನ ಮಡದಿಯಾದ ಶಾಂತಲೆಯು ಗಂಡನೊಡನೆ ಆಡಳಿತವನ್ನು ನಡೆಸಿದಳೆಂದು ಶಾಸನಗಳಲ್ಲಿ ಹೇಳಿದೆ. ಕಂತಿ ಎಂಬ ಕವಯಿತ್ರಿ ವೀರಬಲ್ಲಾಳನ ಕಾಲದವಳು. ಶಾಂತ

ಲೆಯ ತಾಯಿ ಮಾಚಿಕಬ್ಬೆಯು ಶ್ರವಣಬೆಳಗುಳದಲ್ಲಿ ಅತ್ಯಂತ ಶ್ರೇಷ್ಠವಾದ ಜೈನಧಾರ್ಮಿಕ ಸಲ್ಲೇಖನಾ ವ್ರತವನ್ನಾಚರಿಸಿ ಶುಭಮರಣವನ್ನು ಪಡೆದಳು. ರನ್ನನ ಆಶ್ರಯದಾತೆಯಾದ ಅತ್ತಿಮಬ್ಬೆಯು ಚಕ್ರವರ್ತಿ ಪೂಜಿತೆಯಾಗಿದ್ದಳು; ದಾನಚಿಂತಾಮಣಿಯಾಗಿದ್ದಳು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅರಮನೆಯಲ್ಲಿ ಲೆಕ್ಕಪತ್ರಗಳನ್ನು ಬರೆದಿಡಲು ಹೆಣ್ಣುಮಕ್ಕಳನ್ನು ನೇಮಿಸಿದ್ದರು. ಈ ಮಾತನ್ನು ಇತಿಹಾಸಜ್ಞನಾದ ನ್ಯೂನಿಸನು ಹೇಳಿರುವನು. ಪ್ರೌಢದೇವರಾಯನ ಕಾಲದಲ್ಲಿ ಹೊನ್ನಮ್ಮನೂ ಅಚ್ಯುತರಾಯನ ಕಾಲದಲ್ಲಿ ತಿರುಮಲಮ್ಮನೂ ಅರಮನೆಯ ಗಮಕಿಗಳಾಗಿದ್ದರು. ಚಿಕ್ಕದೇವರಾಜ ಒಡೆಯರ ಸಮ್ಮುಖದ ಊಳಿಗದವಳಾದ ಸಂಚಿ ಹೊನ್ನಮ್ಮನು ಹದಿಬದೆಯ ಧರ್ಮವನ್ನು ಬರೆದು ಕನ್ಯಾಕೌಸ್ತುಭರತ್ನವಾಗಿರುವಳು.

ಈ ಕಾಲದಲ್ಲಿಯೂ ಕರ್ನಾಟಕದ ಹೆಣ್ಣುಮಕ್ಕಳು ಪುರುಷರಂತೆಯೇ ಮಹತ್ಕಾರ್ಯವನ್ನು ಸಾಧಿಸುತ್ತಿರುವರು. ಮಹಾಕವಯಿತ್ರಿಯರಾದ ಜಯದೇವಿತಾಯಿ ಲಿಗಾಡೆ, ಗುರುವಾಯನಕೆರೆಯ ಜೈನಮಹಿಳೆ (ದಿವಂಗತ ರಾಧಾಬಾಯಿ), ದಿವಂಗತ ತ್ರಿವೇಣಿ ಇವರು ಉತ್ತಮ ಸಾಹಿತಿಗಳು. ಧರ್ಮಸ್ಥಳದ ಹೆಗ್ಗಡಿತಿ ಶ್ರೀಮತಿ ರತ್ನಮ್ಮನವರು ಬಾಹುಬಲಿಯ ಬೃಹನ್ಮೂರ್ತಿಯನ್ನು ಮಾಡಿಸಿ ಕಾರಣಕನ್ಯೆಯಾಗಿರುವರು! ಈಗಂತೂ ಉದ್ಯೋಗಶೀಲರಾದ ಹೆಣ್ಣುಮಕ್ಕಳು ಸರಕಾರದ ಎಲ್ಲ ಇಲಾಖೆಗಳಲ್ಲಿಯೂ ತುಂಬಿ ಹೋಗಿರುವರು.

ಹಿಂದೆ ವಿಧವೆಯಾದ ಸ್ತ್ರೀಯು ಗಂಡನೊಡನೆ ಸಹಗಮನ ಮಾಡುವ ಪರಿಪಾಟಿಯಿದ್ದಿತು. ಹತ್ತನೆಯ ಶತಮಾನದಲ್ಲಿದ್ದ ದಾನಚಿಂತಾಮಣಿ ಅತ್ತಿಮಬ್ಬೆಯ ತಂಗಿ ಗುಂಡಮಬ್ಬೆ ತನ್ನ ಗಂಡನ ಕಳೇಬರದ ಜೊತೆಯಾಗಿ ಸಹಗಮನ ಮಾಡಿದಳು. ಈ ಪದ್ಧತಿಯು ಬ್ರಿಟಿಷರು ಬಂದಮೇಲೂ ನಮ್ಮಲ್ಲಿದ್ದಿತು. ಗೌರ್ನರ್ ಜನರಲ್ ಬೆಂಟಿಂಕನು ಕಾನೂನನ್ನು ರಚಿಸಿ ಈ ದುಷ್ಟಪದ್ಧತಿಯನ್ನು ಹೋಗಲಾಡಿಸಿದನು. ಈ ರೀತಿ ಸಹಗಮನ ಮಾಡಿದವರ ನೆನಪಿಗಾಗಿ ಮಹಾಸತಿ ಶಿಲೆಯನ್ನು ಸ್ಥಾಪಿಸುತ್ತಿದ್ದರು. ಇದಕ್ಕೆ ಮಾಸ್ತಿಕಲ್ಲು ಎನ್ನುವರು. ನಾಡಿನ ಮೂಲೆಮೂಲೆಗಳಲ್ಲಿಯೂ ಇಂಥ ಕಲ್ಲುಗಳನ್ನು ನಾವು ಕಾಣಬಹುದು.



ಬೊಮ್ಮನಹಳ್ಳಿಯ ಮಾಸ್ತಿಕಲ್ಲು

ಹೆಣ್ಣಿಗೆ ಪುನರ್ ವಿವಾಹಕ್ಕೆ ಅವಕಾಶ ಅಷ್ಟಾಗಿ ಇರಲಿಲ್ಲ. ಉತ್ತಮ ವರ್ಗದವರು ವಿಧವೆಯನ್ನು ವಿರೂಪಗೊಳಿಸಿ ಅಮಂಗಳದ ಸಂಕೇತವೆಂದು ಕೀಳಾಗಿ ನೋಡುತ್ತಿದ್ದರು. ಕೆಳದರ್ಜೆ ಜನರಲ್ಲಿ ವಿಧವೆಗೂ, ಗಂಡ ತೊರೆದ ವಳಿಗೂ ಮತ್ತೆ ವಿವಾಹ ನಡೆಯುತ್ತಿತ್ತು. ಇದನ್ನು ಕೂಡಿಕೆಯೆನ್ನುವರು. ಇಂದೂ ಇಂಥ ಪದ್ಧತಿಗಳಿವೆ. ಉತ್ತರ ಕರ್ನಾಟಕ, ಸಾಗರ ಈ ಭಾಗದ

ಕೆಲವು ಜೈನಪಂಗಡಗಳಲ್ಲಿ ಇಂದಿಗೂ ಹೆಣ್ಣಿಗೆ ಪುನರ್ವಿವಾಹವುಂಟು.

ನಮ್ಮ ಧಾರ್ಮಿಕ ಸಂಪ್ರದಾಯಗಳೂ, ಸಂಗೀತ, ನರ್ತನ, ಚಿತ್ರಕಲೆಗಳೂ ಬದುಕಿಬಂದಿರುವುದು ನಮ್ಮ ಸ್ತ್ರೀಯರ ಭಕ್ತಿ, ಕಲಾಭಿರುಚಿ ಹಾಗೂ ಅವರ ಭಾವಪರವಶತೆಯಿಂದಲೇ ಎಂದು ಹೇಳಬಹುದು.

ವ್ಯಾಪಾರ

ವೀರಬಣಜಿಗರು ಹಿಂದಿನಿಂದಲೂ ವ್ಯಾಪಾರವನ್ನೇ ತಮ್ಮ ವೃತ್ತಿಯನ್ನಾಗಿಟ್ಟುಕೊಂಡು ನಾಡಿನ ಆರ್ಥಿಕ ಜೀವನದ ಜೀವನಾಡಿಗಳಾಗಿದ್ದರು. ಹೊರನಾಡಿನೊಡನೆ ವ್ಯವಹಾರವನ್ನೂ ನಡೆಸುತ್ತಿದ್ದರು. ಆಯಾತ ನಿರ್ಯಾತಗಳಿಗೆ ಕರವನ್ನು ಕಟ್ಟುತ್ತಿದ್ದರು ಕಸ್ತೂರಿ, ಕುಂಕುಮ, ಕರ್ಪೂರ, ಕೇಸರಿ ಇವನ್ನು ಹೊರನಾಡಿನಿಂದ ತರಿಸಿ ಜನತೆಗೆ ಸಂತೆಗಳಲ್ಲಿ, ಜಾತ್ರೆಗಳಲ್ಲಿ ಇಲ್ಲವೇ ತಮ್ಮ ಅಂಗಡಿಗಳಲ್ಲಿ ಒದಗಿಸುತ್ತಿದ್ದರು. ಬೆಳೆದ ಪದಾರ್ಥಗಳನ್ನು ಕೊಂಡುಕೊಂಡು ಬೇಕಾದ ಸ್ಥಳಗಳಿಗೆ ಎತ್ತಿನ ಬಂಡಿಯಲ್ಲಿ, ಹಡಗುಗಳಲ್ಲಿ ರವಾನಿಸುತ್ತಿದ್ದರು. ಮೂಡಬಿದರೆಯ ಜೈನ ವರ್ತಕರು ಪಾಶ್ಚಿಮಾತ್ಯ ರಾಷ್ಟ್ರಗಳಿಗೂ ವ್ಯಾಪಾರಕ್ಕಾಗಿ ಹೋಗುತ್ತಿದ್ದರು. ಆ ವರ್ತಕ ಮಂಡಳಿ ಮಾಡಿಸಿಕೊಟ್ಟ ರತ್ನದ ಜಿನಬಿಂಬಗಳನ್ನು ಈಗಲೂ ಮೂಡಬಿದರೆಯಲ್ಲಿ ನೋಡಬಹುದು. ಕರ್ನಾಟಕದ ವ್ಯಾಪಾರಿಗಳು ನೀತಿವಂತರಾಗಿದ್ದರು. ಶ್ರವಣಬೆಳಗುಳದ ಒಂದು ಶಾಸನದಲ್ಲಿ ವ್ಯಾಪಾರಿಗಳು ಹೊರಗಡೆಯ ವ್ಯಾಪಾರದಿಂದ ಬರುವ ಆದಾಯದಲ್ಲಿ ಒಂದು ಪಾಲನ್ನು ಕ್ಷೇತ್ರದ ದೇಗುಲಗಳಿಗೆ ಕೊಡುವುದಾಗಿ ಒಪ್ಪಂದಮಾಡಿಕೊಂಡಿದ್ದರು. ನಮ್ಮ ರಾಷ್ಟ್ರದ ರಾಜರನ್ನೂ ಈ ವ್ಯಾಪಾರಿಗಳು ದಾನಧರ್ಮಗಳಲ್ಲಿ ಮೀರಿಸಿದ್ದರು. ಹಿಂದಿನ ನೂರಾರು ದೇವಾಲಯಗಳನ್ನು ವ್ಯಾಪಾರಿಗಳು ನಿರ್ಮಿಸಿರುವರು. ಪುಲಿಕೇಶಿಯ ಕಾಲದಲ್ಲಿ ಪಾರ್ಸಿ ದೇಶಕ್ಕೂ ಕರ್ನಾಟಕಕ್ಕೂ ನಡುವೆ ವ್ಯಾಪಾರ ನಡೆಯುತ್ತಿತ್ತು. ವಿಜಯನಗರದ ಕಾಲದಲ್ಲಿ ಅರಬ್ಬಿದೇಶಕ್ಕೂ ಕರ್ನಾಟಕಕ್ಕೂ ನಡುವೆ ವ್ಯವಹಾರವಿದ್ದಿತು. ಪೋರ್ಚುಗೀಸರೂ, ಫ್ರೆಂಚರೂ, ಇಂಗ್ಲಿಷರೂ ವಾಣಿಜ್ಯರಂಗಕ್ಕೆ ಬಂದಮೇಲೆ ಆದಾಯದ ಬಹುಭಾಗವನ್ನು ಅವರು ಕಬಳಿಸಿದರು.

ಹಿಂದೆ ಕರ್ನಾಟಕದ ವ್ಯಾಪಾರದಲ್ಲಿ ವಿನಿಮಯ ಪದ್ಧತಿ ಹೆಚ್ಚಾಗಿತ್ತು. ತಮ್ಮಲ್ಲಿರುವ ಪದಾರ್ಥವನ್ನು ತಮಗೆ ಬೇಕಾದ ಪದಾರ್ಥಕ್ಕೆ ವಿನಿಮಯ

ಮಾಡಿಕೊಳ್ಳುತ್ತಿದ್ದರು. ನಾಣ್ಯಪದ್ಧತಿ ಬಂದ ನಂತರ ಪದಾರ್ಥಗಳ ಬೆಲೆ ನಾಣ್ಯಗಳಲ್ಲಿ ನಿಷ್ಕರ್ಷೆಯಾಗಿ ವ್ಯಾಪಾರವು ಸುಗಮವಾಯಿತು. ಹೊಯ್ಸಳರ ಕಾಲದಲ್ಲಿ ವ್ಯಾಪಾರಿಗಳ ಬ್ಯಾಂಕುಗಳಿದ್ದವು ಎಂಬುದಕ್ಕೆ ಶಾಸನಾಧಾರವಿದೆ. ವೃತ್ತಿ ಸಂಘಗಳು ಬ್ಯಾಂಕಿನ ಕಾರ್ಯವನ್ನು ಮಾಡುತ್ತಿದ್ದವು. ಚಿನ್ನ, ಬೆಳ್ಳಿ, ತಾಮ್ರಗಳ ನಾಣ್ಯಗಳಿದ್ದುದಕ್ಕೆ ಶಾಸನಾಧಾರವಿದೆ. ರಾಷ್ಟ್ರಕೂಟರ ನಾಣ್ಯಗಳಲ್ಲಿ



ಕಂಠೀರವ ನರಸರಾಜ ಒಡೆಯರ ಕಂಠೀರಾಯ ಹಣ

ಅವನ್ನು ಹೊರಡಿಸಿದ ದಿನಾಂಕದ ಉಲ್ಲೇಖವನ್ನೂ ಕಾಣಬಹುದು. ದ್ರಮ್ಮ, ಸುವರ್ಣ, ಗದ್ಯಾಣ, ಕಲಂಜು, ಕಾಸು, ವಿಸದಿ ಇತ್ಯಾದಿ ನಾಣ್ಯಗಳಿದ್ದವು. ಕಲಚುರ್ಯ ರಾಯಮುರಾರಿಯು ಟಂಕಶಾಲೆಯಿಟ್ಟಿದ್ದನು. ಮೈಸೂರಿನ ಒಡೆಯರ 'ಕಂಠೀರಾಯವರಹ'ಗಳನ್ನು ಈಗಲೂ ಕಾಣಬಹುದು. ಪೋರ್ಚು ಗೀಸರೂ, ಫ್ರೆಂಚರು, ಇಂಗ್ಲಿಷರೂ ಬಂದನಂತರ ನಾಣ್ಯಪದ್ಧತಿ ಸುಧಾ ರಿಸಿತು. ಕಾಗದದ ಹಣವನ್ನು ಇಂಗ್ಲಿಷಿನವರೇ ಪ್ರಾರಂಭಿಸಿ ನಾಣ್ಯ ಚಲಾವಣೆ ಯನ್ನು ಸುಲಭಗೊಳಿಸಿದರು.

ಸದ್ಯದ ವಾಣಿಜ್ಯ ಕ್ಷೇತ್ರ

ಕರ್ನಾಟಕವು ಸಮೃದ್ಧವಾದ ರಾಷ್ಟ್ರ. ಕಬ್ಬಿಣದ ಅದುರು, ಕೊಬ್ಬರಿ, ಹೊಗೆಸೊಪ್ಪು, ಎಣ್ಣೆಬೀಜ, ಸಕ್ಕರೆ, ಬೆಲ್ಲ, ರೇಷ್ಮೆ, ಹತ್ತಿ, ಕಾಫಿ, ಏಲಕ್ಕಿ, ಗೋಡಂಬಿ ಮುಂತಾದ ಪದಾರ್ಥಗಳನ್ನು ಕರ್ನಾಟಕ ರಫ್ತು (ಹೊರಗೆ ಕಳಿಸುವುದು) ಮಾಡುತ್ತಿದೆ. ಯಂತ್ರಗಳು, ಬಟ್ಟೆ, ಬೇಳೆ, ಚರ್ಮದ ವಸ್ತುಗಳು, ತಾಮ್ರ, ಹಿತ್ತಾಳೆ, ಕೆಲವು ಸಾಂಬಾರದ ಪದಾರ್ಥಗಳು, ಔಷಧ ಗಳನ್ನು ಹೊರಗಿನಿಂದ ನಾವು ಆಮದು ಮಾಡಿಕೊಳ್ಳುತ್ತಿರುವೆವು. ಬಹು ಪಾಲು ವ್ಯಾಪಾರವನ್ನು ಅನ್ಯರ ಕೈಗೆ ಕೊಟ್ಟು ಕನ್ನಡ ಜನ ಬಡವರಾಗು ತ್ತಿರುವರು.

ಕರ್ನಾಟಕದಲ್ಲಿ ಯುದ್ಧಕಲೆ

ಯುದ್ಧ ಕಲೆಯಲ್ಲಿ ಕನ್ನಡಿಗರು ಪುರಾತನ ಕಾಲದಿಂದಲೂ ಕುಶಲರಾಗಿರುವರು. ರಾಜನು ಸ್ವಂತ ಸೈನ್ಯವನ್ನು ಇಟ್ಟುಕೊಂಡಿರುತ್ತಿದ್ದನು. ಯುದ್ಧ ಕಾಲದಲ್ಲಿ ಸಾಮಂತರ ಸೇನೆಗಳೂ ನೆರವಿಗೆ ಬರುತ್ತಿದ್ದವು. ಅಶ್ವಸೈನ್ಯ, ಗಜಸೈನ್ಯ, ಪದಾತಿ (ಕಾಲಾಳು) ಬಲಗಳಿಂದ ಕೂಡಿ ಸುಸಜ್ಜಿತವಾಗಿದ್ದವು. ಉಚ್ಚ ಸೇನಾಧಿಕಾರಿಗಳನ್ನು ದಂಡನಾಯಕರೆಂದೂ ಮಹಾಸಾಮಂತಾಧಿಪತಿಯೆಂದೂ ಕರೆಯುತ್ತಿದ್ದರು. ಅಶ್ವಪತಿಗಳನ್ನು ಪಳ್ಳಿಕಾರ, ತುರಗ ಸಾಹಿಣಿ ಎಂದು ಕರೆಯುತ್ತಿದ್ದರು. ರಾಜ್ಯದ ಗಡಿಗಳಲ್ಲಿ ಸೀಮಾರಕ್ಷಕರಿರುತ್ತಿದ್ದರು. ಯಾವ ಜಾತಿಯ ಜನರಾದರೂ ಸೈನ್ಯಕ್ಕೆ ಸೇರಬಹುದಾಗಿತ್ತು. ಕಾಲಾಳುಗಳು ಈಟಿ, ಭರ್ಜಿ, ಬಾಣ ಇವುಗಳಿಂದ ರಕ್ಷಿಸಿಕೊಳ್ಳಲು ಚರ್ಮದ ಇಲ್ಲವೇ ಉಕ್ಕಿನ ಕವಚಗಳನ್ನು ತೊಡುತ್ತಿದ್ದರು. ಶಿರಸ್ತ್ರಾಣ (ತಲೆಯನ್ನು ರಕ್ಷಿಸುವ ಸಾಧನ) ತೊಡುತ್ತಿದ್ದರು. ಖಡ್ಗ, ಗುರಾಣಿ, ಬಿಲ್ಲುಬಾಣ ಇವನ್ನು ಯುದ್ಧದಲ್ಲಿ ಬಳಸುತ್ತಿದ್ದರು. ಕುದುರೆಗಳಿಗೂ ಲೋಹವಕ್ಕರೆಯೆಂಬ ಕವಚವನ್ನು ತೊಡಿಸುತ್ತಿದ್ದರು. ಗಜಸೇನೆಗೆ ಹೆಚ್ಚಿನ ಮಹತ್ವವಿತ್ತು. ಸೈನ್ಯವನ್ನು ಕೊಲ್ಲುವ ವಿದ್ಯೆಯನ್ನು ಆನೆಗೆ ಕಲಿಸುತ್ತಿದ್ದರು. ಆನೆಗಳನ್ನು ಪಳಗಿಸಿ ಯುದ್ಧ ಕಲೆಯಲ್ಲಿ ತರಪೇತು ಕೊಡುವ ವ್ಯವಸ್ಥೆ ಗಂಗರಾಜರ ಕಾಲದಲ್ಲಿ ಶ್ರೇಷ್ಠ ಮಟ್ಟದಲ್ಲಿತ್ತು. ರಣರಂಗದ ಮುಂಭಾಗದಲ್ಲಿ ಗಜಸೈನ್ಯವನ್ನು ನಿಲ್ಲಿಸುತ್ತಿದ್ದರು.

ಸೈನ್ಯವು ಯುದ್ಧಯಾತ್ರೆಗೆ ಸನ್ನದ್ಧವಾದಾಗ ಶಂಖ, ಕಹಳೆ, ತುತ್ತೂರಿ, ಡೋಲು, ನಗಾರಿ ಇವು ಮೊಳಗುತ್ತಿದ್ದವು. ಸೈನ್ಯ ತಂಗಲು ಗುಡಾರಗಳನ್ನು ಬಳಸುತ್ತಿದ್ದರು. ಆನೆಗಳ ಹಿಂದೆ ಧನುರ್ಬಾಣವುಳ್ಳ ಪದಾತಿ ಪಡೆಯೂ, ಅದನ್ನು ಹಿಂಬಾಲಿಸುವ ಕುದುರೆಗಳೂ, ಅನಂತರ ಆಹಾರ ಸಾಮಗ್ರಿಯ ಬಂಡಿಗಳೂ ಬರುತ್ತಿದ್ದವು. ರಾಜನ ಧ್ವಜವು ಮುಂಚೂಣಿಯಲ್ಲಿ ರಥ ಇಲ್ಲವೇ ಆನೆಯ ಮೇಲೆ ಅಂಬಾರಿಯಲ್ಲಿ ಹಾರಾಡುತ್ತಿತ್ತು. ಅಂದಿನ ಯುದ್ಧ ತಂತ್ರವು ಪುರಾತನ ವ್ಯೂಹ ಪದ್ಧತಿಯನ್ನು ಅನುಸರಿಸಿತ್ತು. ಯುದ್ಧದಲ್ಲಿ ಸೇನಾಧಿಪತಿ ಗೌರವ ಪಡೆದು ಹೋರಾಡಲು ಯೋಧರು ಸದಾ ಕಾತರರಾಗಿರುತ್ತಿದ್ದರು.

ಪ್ರಬಲವಾದ ಸೈನ್ಯ ಹಾಗು ಯುದ್ಧ ಕೌಶಲಗಳಿದ್ದುದರಿಂದಲೇ ಪುಲಿ



ಕರ್ನಾಟಕ ಶಿಲ್ಪ : ಯುದ್ಧದ ದೃಶ್ಯ (ಹಳೇಬೀಡು)

ಕೇಶಿಯು ಕ್ರಿ.ಶ. ೬೧೨ರಲ್ಲಿ ಹರ್ಷವರ್ಧನನನ್ನು ಸೋಲಿಸಲು ಸಾಧ್ಯವಾಯಿತು. ರಾಷ್ಟ್ರಕೂಟರು ಆಸೇತು ಹಿಮಾಚಲದ ತನಕ ದಿಗ್ವಿಜಯವೆಸಗಬೇಕಾದರೆ ಅಂದಿನ ಕರ್ನಾಟಕ ಸೈನ್ಯದ ಧೈರ್ಯ, ಶೌರ್ಯ, ಹಾಗೂ ಯುದ್ಧಕಲೆಯ ನೈಪುಣ್ಯ ಎಷ್ಟಿರಬಹುದೆಂದು ಊಹಿಸಬಹುದು.

ಕೋಟೆಕೊತ್ತಲು

ರಾಜಧಾನಿಗಳನ್ನೂ ಪ್ರಮುಖ ನಗರಗಳನ್ನೂ ರಕ್ಷಿಸಲು ಊರಿನ ಸುತ್ತ ಕಲ್ಲಿನ ಬಲವಾದ ಗೋಡೆ ಕಟ್ಟುತ್ತಿದ್ದರು. ಇದಕ್ಕೆ ಕೋಟೆಯೆನ್ನುವರು. ಕೋಟೆಯ ಮೇಲೆ ಕುಳಿತು ಹೊರಗಿನ ಜನಕ್ಕೆ ಕಾಣದಂತೆ ಸ್ವರಕ್ಷಣೆ ಮಾಡಿಕೊಂಡು ಶತ್ರುಗಳೊಡನೆ ಹೋರಾಡಲು ಅನುಕೂಲವಿತ್ತು. ಕೆಲವು ರಾಜಧಾನಿಗಳಿಗೆ ಏಳು ಸುತ್ತಿನ ಕೋಟೆ ಇದುದ್ದನ್ನು ಈಗಲೂ ನಾವು ಕಾಣಬಹುದು. ಕೋಟೆಯ ಹೊರ ಭಾಗದಲ್ಲಿ ಸುತ್ತಲೂ ಆಳವಾದ ಕಂದಕ ತೋಡಿ ಅದರಲ್ಲಿ ನೀರನ್ನು ತುಂಬುತ್ತಿದ್ದರು. ಕೋಟೆಯ ಒಳಗೇ ಇದ್ದು ತಿಂಗಳಾನುಗಟ್ಟಲೆ ಶತ್ರುಗಳನ್ನು ತಡೆದಿಟ್ಟ ಸಂದರ್ಭಗಳೂ ಉಂಟು. ರಾಯಚೂರು, ನಿಡಗಲ್ಲು, ವಿಜಯನಗರ, ಶ್ರೀರಂಗಪಟ್ಟಣ, ಹಳೆಯಬೀಡು, ಇಲ್ಲೆಲ್ಲ ಭದ್ರವಾದ ಕೋಟೆಗಳಿದ್ದವು. ಮಧುಗಿರಿಯಲ್ಲಿ ಈಗಲೂ ಕೋಟೆಯನ್ನು ಕಾಣಬಹುದು.

ಗರುಡರು

ರಾಜನು ಸತ್ತಾಗ ಅವನೊಡನೆ ಸಾಯಲು ಸಿದ್ಧವಾದ ಪಡೆಗೆ ಗರುಡ ಪಡೆಯೆನ್ನುವರು. ಹೊಯ್ಸಳರ ಕಾಲದಲ್ಲಿ ಸಹಸ್ರಾರು ಜನ ಗರುಡರಿದ್ದರು. ಇವರು ರಾಜನ ಅಂಗರಕ್ಷಕರಾಗಿಯೂ ಇರುತ್ತಿದ್ದರು, ನಿಷ್ಠಾವಂತರಾಗಿ ರಾಜಭಕ್ತಿಯಿಂದ ಶೌರ್ಯಪ್ರದರ್ಶನ ಮಾಡುತ್ತಿದ್ದರು. ರಾಜನು ಸತ್ತಾಗ ಗರುಡನು ತನ್ನ ಪತ್ನಿ, ಸೇವಕ ಸಮೇತನಾಗಿ ಪ್ರಾಣಾರ್ಪಣೆ ಮಾಡುತ್ತಿದ್ದನು.

೧೨೨೦ರಲ್ಲಿ ಹೊಯ್ಸಳ ವೀರಬಲ್ಲಾಳನು ಸತ್ತಾಗ ಕುವರಲಕ್ಷ್ಮನು ಪತ್ನಿಸಮೇತನಾಗಿ ಶಾಸನಸ್ತಂಭದ ತುದಿಗೇರಿ ಅಲ್ಲಿಂದ ಬಿದ್ದು ಪ್ರಾಣವನ್ನು ಕಳೆದುಕೊಂಡನು. ಬೇಲೂರಿನಲ್ಲಿ ಇವನ ಸ್ಮಾರಕವಾಗಿ ವೀರಗಲ್ಲಿನ ಶಾಸನವಿದೆ. ಇಂಥವರನ್ನು 'ಲೆಂಕ'ರೆನ್ನುವರು.

ರಾಷ್ಟ್ರರಕ್ಷಣಾ ಕಾರ್ಯದಲ್ಲಿ ಹುತಾತ್ಮರಾದವರ ಸ್ಮರಣೆಗಾಗಿ ವೀರ



ರಾಯಚೂರು ಕೋಟೆ



ದೊಡ್ಡ ಹುಲ್ಲೂರು ವೀರಗಲ್ಲು

ಗಲ್ಲುಗಳನ್ನು ರಾಜರೂ ಶ್ರೀಮಂತರೂ ಸ್ಥಾಪಿಸುತ್ತಿದ್ದರು. ಇಂಥ
ಗಲ್ಲುಗಳು ಕರ್ನಾಟಕದ ಮೂಲೆ ಮೂಲೆಗಳಲ್ಲಿಯೂ ಇವೆ.

'ಶೂಲಬ್ರಹ್ಮ' ಮತ್ತು 'ವೇಳೆವಾಕ್ಯ' ಎಂಬ ಹೆಸರಿನ ಆತ್ಮಬಲಿ
ಪ್ರಕರಣಗಳೂ ಬಳಕೆಯಲ್ಲಿದ್ದುವು. ನೆಲದ ಮೇಲಿರಿಸಿದ ಬರ್ಜಿಗಳ ಮೊ
ಮೇಲೆ ಕಂಬದ ತುದಿಯಿಂದ ಹಾರಿಬಿದ್ದು ಪ್ರಾಣ ನೀಗಿಕೊಳ್ಳುವು
'ಶೂಲಬ್ರಹ್ಮ' ಎಂದು ಕರೆಯುತ್ತಿದ್ದರು. ರಾಜನೊಡನೆ ತಾವೂ ಸ್ವ
ಹೋಗುವುದಾಗಿ ಸೇವಕರು ಪಣತೊಡುವುದನ್ನು 'ವೇಳೆವಾಕ್ಯ' ಎನ
ದ್ದರು. ಈ ರೀತಿ ಕಾಲವಾದವರ ಸ್ಮಾರಕವಾಗಿ ವೀರಗಲ್ಲುಗಳನ್ನು ಸ
ಸಿರುವರು.

ಗರುಡರು, ಲೆಂಕರು, ಜೋಳವಾಳಿ, (ಅನ್ನದ ಋಣ ಸ್ಮರಿಸುವ
ವೇಳೆವಾಳಿಗಳು–ಇವರಿಗೆಲ್ಲ ರಾಜನು ಮಾನ್ಯಹಾಕಿಕೊಟ್ಟು ಗೌರವಿಸುತ್ತಿದ್ದ
ಇವರೆಲ್ಲರೂ ದೃಢಸಂಕಲ್ಪದ ಸಾಹಸಿಗಳಾಗಿದ್ದರು.

ಮನರಂಜನೆ

ಕನ್ನಡಿಗರು ಹುಟ್ಟು ರಸಿಕರು, ವಿನೋದಪ್ರಿಯರು. ಮನರಂ
ಕೇಂದ್ರವಾದ ಬನವಾಸಿಯನ್ನು ನೆನೆದಾಗಲೆಲ್ಲ 'ಆರ್ ಅಂಕುಶವಿಟ್ಟೊ
ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂದು ಪಂಪಕವಿ ಹೇಳಿಕೊ
ರುವರು. ಸಂಗೀತ, ನರ್ತನ, ಯಕ್ಷಗಾನ, ಬಯಲಾಟ. ತಾಳಮದ
ಹರಿಕಥೆ ಇವು ಪರಂಪರಾಗತವಾಗಿ ಬಂದ ಸಾಂಸ್ಕೃತಿಕ ಮನರಂ
ಕಾರ್ಯಗಳು. ಹೆಣ್ಣುಮಕ್ಕಳು ಕೋಲಾಟ, ಚೌಕಬಾರ, ಅಣ್ಣ
ಮುಂತಾದ ಆಟಗಳಲ್ಲಿ ವಿನೋದ ಪಡುತ್ತಿದ್ದರು. ಗಂಡುಮಕ್ಕಳು
ದಂಡ, ದಾಂಡು, ಬುಗುರಿ, ಉಪ್ಪಾರಪಟ್ಟೆ ಮುಂತಾದ ಆಟಗಳನ್ನು
ಹರ್ಷಿಸುತ್ತಿದ್ದರು. ಇವು ಜಾನಪದ ಮನರಂಜನೆಗಳು.

ಜಾತ್ರೆ, ರಥೋತ್ಸವ, ದೀಪೋತ್ಸವ ಇವು ಧಾರ್ಮಿಕ ಮನರ
ಗಳು. ಯುಗಾದಿ, ಗೌರಿಗಣೇಶ, ಮಾರನೌಮಿ, ದೀಪಾವಳಿ, ಸಂಕರಾ
ಶಿವರಾತ್ರಿ ಮುಂತಾದ ಹಬ್ಬಗಳನ್ನು ಆಚರಿಸಿ ಕನ್ನಡಿಗರು ಸಂತೋಷ
ರಾಗುತ್ತಿದ್ದರು. ಈಗಲು ಕೆಲವು ಮನರಂಜನ ಕಾರ್ಯಗಳು, ಹಬ್ಬ
ದಿನಗಳು ಉಳಿದುಕೊಂಡುಬಂದಿವೆ.